2016 ಕ.ತೀ.ವ. 574

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಶ್ರೀ ಮಾದಲ ವೆಂಕಟ ಅಕ್ಷಯ್ –ವಿರುದ್ಧ– ಕಾಮೆಡ್‌ಕೆ ಯುಜಿಇಟಿ ಮತ್ತು ಇನ್ನೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227 ರಡಿಯಲ್ಲಿ ರಿಟ್ ಅರ್ಜಿ.

ಎದುರುದಾರರು ದಿನಾಂಕ 02.12.2014 ರಂದು COMEDK UGET–2015 ರ ಪ್ರವೇಶ ಪರೀಕ್ಷೆಗಾಗಿ ನೀಡಿದ ಅಧಿಸೂಚನೆಯಲ್ಲಿ ಅಭ್ಯರ್ಥಿಯು ಆಂಗ್ಲಭಾಷೆಯಲ್ಲಿ ಶೇ.50/– ಕ್ಕಿಂತ ಹಾಗು SC, ST ಹಾಗೂ OBC ಅಭ್ಯರ್ಥಿಯು ಆಂಗ್ಲಭಾಷೆಯಲ್ಲಿ ಶೇ.40% ಕ್ಕಿಂತ ಕಡಿಮೆಯಿಲ್ಲದ ಅಂಕಗಳನ್ನು ಗಳಿಸಿದರೆ ಮಾತ್ರ ರ್‍ಯಾಂಕ್ ಪಡೆಯಲು ಅರ್ಹರೆಂದು ನೀಡಿದ ಅಧಿಸೂಚನೆಯನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ವೈದ್ಯಕೀಯ ಕೋರ್ಸಿಗೆ ಪ್ರವೇಶವನ್ನು ಪಡೆಯಲು ಅಭ್ಯರ್ಥಿಗಳು PCB ವಿಷಯಗಳಲ್ಲಿ ಪಡೆದ ಅಂಕಗಳನ್ನು ಮಾತ್ರ ಪರಿಗಣಿಸಲಾಗುತ್ತದೆಯೇ ಹೊರತು ಅವರು ಆಂಗ್ಲಭಾಷೆಯ ವಿಷಯದಲ್ಲಿ ಪಡೆದ ಅಂಕಗಳನ್ನು ರ್‍ಯಾಂಕಿಂಗ್ ನೀಡುವಲ್ಲಿ ಪರಿಗಣಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.

* ರಿಟ್ ಅರ್ಜಿ ಸಂಖ್ಯೆ. 22730/2015 (ಇಡಿಎನ್–ಆರ್‌ಇಎಸ್) ಹಾಗೂ ಇತರೆ, ದಿನಾಂಕ 17ನೇ ಆಗಸ್ಟ್, 2015

| *ಉಲ್ಲೇಖಿಸಲಾದ ಮೊಕದ್ದಮೆಗಳು:* | | *ಪ್ಯಾರಾಗಳಲ್ಲಿ* |
|---|---|---|
| *1.* | *(2002) 8 ಎಸ್‌ಸಿಸಿ 481*<br>*ಟಿಎಂಎ ಪೈ ಫೌಂಡೇಶನ್ –ವಿರುದ್ಧ–*<br>*ಕರ್ನಾಟಕ ರಾಜ್ಯ* | *(ಉಲ್ಲೇ) 5* |
| *2.* | *(2003) 6 ಎಸ್‌ಸಿಸಿ 697*<br>*ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್*<br>*–ವಿರುದ್ಧ– ಕರ್ನಾಟಕ ರಾಜ್ಯ* | *(ಉಲ್ಲೇ) 17* |
| *3.* | *(2005) 6 ಎಸ್‌ಸಿಸಿ 537*<br>*ಪಿ.ಎ. ಇನಾಂದಾರ್ ಮತ್ತು ಇತರರು*<br>*–ವಿರುದ್ಧ– ಮಹಾರಾಷ್ಟ್ರ ರಾಜ್ಯ* | *(ಉಲ್ಲೇ) 17* |

**ರಿಟ್ ಅರ್ಜಿ ಸಂ: 22730/2015:**
ಅರ್ಜಿದಾರರ ಪರ: ಶ್ರೀ ಎಸ್. ನಾಗರಾಜ, ವಕೀಲರು;
1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಫರ್‍ಾ. ಫಾತೀಮಾ, ವಕೀಲರು;
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎ.ಕೆ. ವಸಂತ್–ಎಜಿಎ.

**ರಿಟ್ ಅರ್ಜಿ ಸಂ: 23049–23050/2015 ಹಾಗೂ ರಿಟ್ ಅರ್ಜಿ ಸಂ: 24247/2015**
ಅರ್ಜಿದಾರರ ಪರ: ಶ್ರೀ ಅಜೋಯ್‌ಕುಮಾರ್ ಪಾಟೀಲ್, ವಕೀಲರು,
1ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಫರಾ ಫಾತೀಮಾ, ವಕೀಲರು,
2 ಮತ್ತು 3ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಕೆ. ವಸಂತ್, ಎಜಿಎ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

ಈ ಎಲ್ಲಾ ರಿಟ್ ಅರ್ಜಿಗಳಲ್ಲಿ ಒಂದೇ ಸಾಮಾನ್ಯ ಕಾನೂನು ಪ್ರಶ್ನೆ ಒಳಗೊಂಡಿರುವುದರಿಂದ, ಅವುಗಳನ್ನು ಒಟ್ಟಾಗಿ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ ಮತ್ತು ಈ ಸಾಮಾನ್ಯ (ಒಂದೇ) ಆದೇಶದ ಮೂಲಕ ವಿಲೆ ಮಾಡಲಾಗಿದೆ.

2. ಅನುಕೂಲದ ಉದ್ದೇಶಕ್ಕಾಗಿ ನಾವು ರಿಟ್ ಅರ್ಜಿ ಸಂಖ್ಯೆ. 24247/2015 ರಲ್ಲಿನ ಸಂಗತಿಗಳನ್ನು ಇಲ್ಲಿ ನೀಡಿದ್ದೇವೆ.

ಕಾಮೆಡ್‌ಕೆ ಸದಸ್ಯ ಸಂಸ್ಥೆಗಳಲ್ಲಿ ವೈದ್ಯಕೀಯ, ದಂತವೈದ್ಯ ಮತ್ತು ಇಂಜಿನಿಯರಿಂಗ್ ಪದವಿಗಳಿಗೆ ಪ್ರವೇಶಕ್ಕಾಗಿ ದಿನಾಂಕ 10.05.2015 ರಂದು ಕಾಮೆಡ್‌ಕೆ ಯುಜಿಇಟಿ–2015ರ ಪ್ರವೇಶ ಪರೀಕ್ಷೆಯನ್ನು ನಡೆಸುವುದಕ್ಕಾಗಿ 1ನೇ ಪ್ರತ್ಯರ್ಜಿದಾರರು ದಿನಾಂಕ 02.12.2014 ರ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅರ್ಜಿದಾರನು ತನ್ನ 10+2 ಅನ್ನು ತಮಿಳುನಾಡಿನಲ್ಲಿ ಪೂರ್ಣಗೊಳಿಸಿದ್ದಾನೆ ಮತ್ತು ಎಂ.ಬಿ.ಬಿ.ಎಸ್. ಕೋರ್ಸಿಗೆ ಅರ್ಹನಾಗಿದ್ದಾನೆ. ಅವನು ದಿನಾಂಕ 10.05.2015 ರಂದು ಕಾಮೆಡ್‌ಕೆ ಯುಜಿಇಟಿ–2015ರ ಪರೀಕ್ಷೆಗೆ ಹಾಜರಾಗಿದ್ದಾನೆ. ಅಧಿಸೂಚನೆಯಿಂದ ಸ್ಪಷ್ಟವಾಗಿರುವಂತೆ, 1ನೇ ಪ್ರತ್ಯರ್ಜಿದಾರರು ಕಾಮೆಡ್‌ಕೆ ಯುಜಿಇಟಿ–2015 ರಲ್ಲಿ ಇಂಗ್ಲೀಷ್ ಭಾಷೆಯನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ (ಪಿಸಿಬಿ) ದೊಂದಿಗೆ ಪರೀಕ್ಷಿಸಬೇಕಾದ ವಿಷಯಗಳಲ್ಲಿ ಒಂದಾಗಿದೆ ಎಂದು ನಿಗದಿಪಡಿಸಿದ್ದಾರೆ. ಅಭ್ಯರ್ಥಿಗಳು ಇಂಗ್ಲೀಷ್‌ನಲ್ಲಿ ಶೇ. 50 ಅಂಕಗಳನ್ನು ಗಳಿಸಬೇಕೆಂದು ಅಗತ್ಯಪಡಿಸಲಾಗಿದೆ. ಆದರೆ, ಹಾಗೆ ಗಳಿಸಿದ ಅಂಕಗಳನ್ನು ರ್‍ಯಾಂಕ್ ನಿರ್ಧರಿಸಲು ಸೇರಿಸಿಕೊಳ್ಳುವುದಿಲ್ಲ. ಅಭ್ಯರ್ಥಿಗಳು 'ಪಿಸಿಬಿ' ವಿಷಯಗಳಲ್ಲಿ ಗಳಿಸಿದ ಅಗತ್ಯ ಕನಿಷ್ಠ ಅಂಕಗಳ ಆಧಾರದ ಮೇಲೆ ರ್‍ಯಾಂಕನ್ನು ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು. ಅಷ್ಟೇ ಅಲ್ಲದೆ, ಅಭ್ಯರ್ಥಿಯು ಇಂಗ್ಲೀಷ್‌ನಲ್ಲಿ ಶೇ. 50 ಅಂಕಗಳನ್ನು ಗಳಿಸಲು ವಿಫಲರಾದಲ್ಲಿ, ಅವನು/ಅವಳು ರ್‍ಯಾಂಕಿಗೆ ಅರ್ಹರಾಗುವುದಿಲ್ಲ.

3. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ–2015 ರಲ್ಲಿ, ಇಂಗ್ಲೀಷ್ ಭಾಷೆಯ ಪರೀಕ್ಷೆಗೆ ಹಾಜರಾಗುವ ಅಗತ್ಯವಿಲ್ಲ. ಅಭ್ಯರ್ಥಿಯು ರ್‍ಯಾಂಕ್ ಪಡೆಯಲು 'ಪಿಸಿಬಿ' ವಿಷಯಗಳಲ್ಲಿ ತೇರ್ಗಡೆಯಾದರೆ ಸಾಕಾಗುತ್ತದೆ. ಅದೇ ರೀತಿ, ಬಿಎಲ್‌ಡಿಇ ವಿಶ್ವವಿದ್ಯಾನಿಲಯವು ನಡೆಸುವ ಬಿಎಲ್‌ಡಿಇಯು–ಯುಜಿಇಟಿ–2015 ರಲ್ಲಿ ಎಂಬಿಬಿಎಸ್‌ಗೆ ಪ್ರವೇಶ

ಪಡೆಯುವುದಕ್ಕೆ ರ್‍ಯಾಂಕನ್ನು ನಿರ್ಧರಿಸಲು ಇಂಗ್ಲೀಷ್ ಭಾಷೆಯ ಪರೀಕ್ಷೆಗೆ ಹಾಜರಾಗುವ ಮತ್ತು ಅದರಲ್ಲಿ ತೇರ್ಗಡೆಯಾಗುವ ಅಗತ್ಯವಿಲ್ಲ. ಕೇಂದ್ರ ಸರ್ಕಾರ/ಎಂಸಿಐ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿಯೂ (ಎನ್‌ಇಇಟಿ) ಸಹ ಎಂಬಿಬಿಎಸ್‌ಗೆ ಪ್ರವೇಶ ಪಡೆಯುವುದಕ್ಕೆ ರ್‍ಯಾಂಕನ್ನು ನಿರ್ಧರಿಸಲು ಇಂಗ್ಲೀಷ್ ಭಾಷೆಯ ಪರೀಕ್ಷೆಗೆ ಹಾಜರಾಗುವ ಹಾಗೂ ಅದರಲ್ಲಿ ತೇರ್ಗಡೆಯಾಗುವ ಅಗತ್ಯವಿಲ್ಲ. ಆದುದರಿಂದ, ಎಂಬಿಬಿಎಸ್‌ಗೆ ಪ್ರವೇಶ ಪಡೆಯುವುದಕ್ಕಾಗಿ, ವಿವಿಧ ಏಜೆನ್ಸಿಗಳು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ರ್‍ಯಾಂಕನ್ನು ನಿರ್ಧರಿಸಲು ಇಂಗ್ಲೀಷ್ ಭಾಷೆಯ ಪರೀಕ್ಷೆಗೆ ಹಾಜರಾಗುವ ಮತ್ತು ಅದರಲ್ಲಿ ತೇರ್ಗಡೆಯಾಗುವ ಅಗತ್ಯವಿಲ್ಲ. ಸದರಿ ಅಗತ್ಯತೆಯನ್ನು 1ನೇ ಪ್ರತ್ಯರ್ಜಿದಾರರು 'ಕಾಮೆಡ್‌ಕೆ ಯುಜಿಇಟಿ'ಗೆ ಮಾತ್ರ ನಿಗದಿಪಡಿಸಿದ್ದಾರೆಂದು ಅರ್ಜಿದಾರನು ಹೇಳಿಕೆ ನೀಡಿದ್ದಾನೆ.

4. ಕಾಮೆಡ್‌ಕೆ, ದಿನಾಂಕ 01.06.2015 ರಂದು ಫಲಿತಾಂಶ ಪ್ರಕಟಿಸಿತು. ಅರ್ಜಿದಾರನು ಇಂಗ್ಲೀಷ್ ಭಾಷೆಯಲ್ಲಿ ಕನಿಷ್ಠ ಶೇ. 50 ಅಂಕಗಳನ್ನು ಗಳಿಸಿಲ್ಲ. ಆದುದರಿಂದ 1ನೇ ಪ್ರತ್ಯರ್ಜಿದಾರರು ಅರ್ಜಿದಾರನಿಗೆ ಯಾವುದೇ ರ್‍ಯಾಂಕನ್ನು ಹಂಚಿಕೆ ಮಾಡಿಲ್ಲ. ಆದುದರಿಂದ, 1ನೇ ಪ್ರತ್ಯರ್ಜಿದಾರರು ಹೊರಡಿಸಿದ, ಅನುಬಂಧ "ಎ" ಯಲ್ಲಿ ದಿನಾಂಕ 20.12.2014ರ ಅಧಿಸೂಚನೆಯ ಎ(ಇ) ಖಂಡವು ನಿರಂಕುಶವಾದುದು, ತಾರತಮ್ಯವುಳ್ಳದ್ದು ಹಾಗೂ ಕಾನೂನುಬಾಹಿರವಾದುದು ಎಂಬ ಘೋಷಣೆಗಾಗಿ ಮತ್ತು ಅದನ್ನು ಬದಿಗಿರಿಸಲು ಹಾಗೂ ಮ್ಯಾಂಡಮಸ್ ರಿಟ್‌ಗಾಗಿ ದಿನಾಂಕ 10.05.2015 ರಂದು 1ನೇ ಪ್ರತ್ಯರ್ಜಿದಾರರು ನಡೆಸಿದ ಕಾಮೆಡ್‌ಕೆ ಯುಜಿಇಟಿ–2015 ರಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ (ಪಿಸಿಬಿ) ಮುಖ್ಯ ವಿಷಯಗಳಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಜಿದಾರನಿಗೆ ರ್‍ಯಾಂಕನ್ನು ನೀಡಲು 1ನೇ ಪ್ರತ್ಯರ್ಜಿದಾರರಿಗೆ ನಿರ್ದೇಶಿಸುವ ಮ್ಯಾಂಡಮಸ್ ರಿಟ್‌ಗಾಗಿ ಅರ್ಜಿದಾರನು ಈ ನ್ಯಾಯಾಲಯದ ಮೊರೆ ಹೋಗಿದ್ದಾನೆ.

5. ನೋಟೀಸನ್ನು ನೀಡಿದ ನಂತರ, ಪ್ರತ್ಯರ್ಜಿದಾರರು ಹಾಜರಾಗಿದ್ದಾರೆ. ಅವರು ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಿದ್ದಾರೆ. ಅವರು ರಿಟ್ ಅರ್ಜಿಗಳಲ್ಲಿ

ಹೇಳಿರುವ ಸಂಗತಿಗಳಲ್ಲಿ ಯಾವುದೇ ವಿವಾದವಿಲ್ಲ. ಅವರು, ಸದರಿ ಎ(ಇ) ಖಂಡದ ಅನುಸಾರ, ಮೆಡಿಕಲ್, ಡೆಂಟಲ್ ಮತ್ತು ಇಂಜಿನಿಯರಿಂಗ್ ಕೋರ್ಸುಗಳ ಪದವಿ ಶಿಕ್ಷಣ ಪ್ರವೇಶಕ್ಕಾಗಿ ಅರ್ಹತಾ ಮಾನದಂಡವೆಂದರೆ, ಅಭ್ಯರ್ಥಿಯು ಇಂಗ್ಲೀಷ್‌ನಲ್ಲಿ ಶೇ. 50ಕ್ಕೆ ಕಡಿಮೆಯಲ್ಲದ ಅಂಕಗಳನ್ನು ಗಳಿಸಿರತಕ್ಕದ್ದು (ಕರ್ನಾಟಕದ ಪ.ಜಾ, ಪ.ಪಂ. ಮತ್ತು ಇ.ಹಿಂ.ವ. ಗಳ ಅಭ್ಯರ್ಥಿಗಳ ವಿಷಯದಲ್ಲಿ ಶೇ.40). ರ್‍ಯಾಂಕ್ ಪಟ್ಟಿಯನ್ನು 'ಪಿಸಿಬಿ' ಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳ ಆಧಾರದ ಮೇಲೆ ಪ್ರತ್ಯೇಕವಾಗಿ ಸಿದ್ಧಪಡಿಸಲಾಗುವ ಕಾರಣದಿಂದ, ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು ರ್‍ಯಾಂಕ್ ಪಟ್ಟಿಯ ನಿರ್ಧಾರಕ್ಕಾಗಿ ಸೇರಿಸಿಕೊಳ್ಳುವುದಿಲ್ಲ. ಅಭ್ಯರ್ಥಿಯು ಇಂಗ್ಲೀಷ್‌ನಲ್ಲಿ ಶೇ. 50 ಅಥವಾ ಶೇ. 40 (ಕರ್ನಾಟಕದ ಪ.ಜಾ, ಪ.ಪಂ. ಮತ್ತು ಇ.ಹಿಂ.ವ. ಗಳ ಅಭ್ಯರ್ಥಿಗಳ ವಿಷಯದಲ್ಲಿ) ಅಂಕಗಳನ್ನು ಗಳಿಸಲು ವಿಫಲನಾ/ಳಾದಲ್ಲಿ ಆ ಅಭ್ಯರ್ಥಿಯು ರ್‍ಯಾಂಕ್ ಪಡೆಯಲು ಅನರ್ಹನಾಗಿರುತ್ತಾನೆ/ಳಾಗಿರುತ್ತಾಳೆ. ಇಂಗ್ಲೀಷ್ ಭಾಷೆಯ ಪತ್ರಿಕೆಯು ಸಾಧಾರಣವಾಗಿ ದ್ವಿತೀಯ ಪಿಯುಸಿ ಅಥವಾ 10+2 ತರಗತಿಯ ಮಟ್ಟದ್ದಾಗಿರುತ್ತದೆ ಮತ್ತು ಅದು ವಿದ್ಯಾರ್ಥಿಯ ಭಾಷಾಭ್ಯಾಸ, ಪದಗಳ, ನುಡಿಗಟ್ಟುಗಳ, ಖಂಡಗಳ ಹಾಗೂ ವಾಕ್ಯಗಳ ರಚನೆಯನ್ನು ಪರೀಕ್ಷಿಸುತ್ತದೆ. ವೈದ್ಯಕೀಯ ಕೋರ್ಸು ಬೇರೆ ಕೋರ್ಸುಗಳಿಗಿಂತ ಉನ್ನತ ವೃತ್ತಿಪರ ಮಟ್ಟದ್ದಾಗಿದೆ ಮತ್ತು ಆ ಕಾರಣದಿಂದ ಅರ್ಹತಾ ಪರೀಕ್ಷೆ ಮತ್ತು ಪ್ರವೇಶ ಪರೀಕ್ಷೆ ಹಾಗೂ ಅದರ ಮುಂದುವರಿಕೆಯಾಗಿ ಇನ್ನೂ ಉತ್ತಮ ಮೆರಿಟ್ ಆಧಾರಿತ ಆಯ್ಕೆಯನ್ನು ಖಚಿತಪಡಿಸುವ ಹಂತದಲ್ಲಿ ಇಂಗ್ಲೀಷ್ ಭಾಷೆಯನ್ನು ನಿಗದಿಪಡಿಸಲಾಗಿದೆ. ಭಾಷೆಯ ಭಾಷಾಭ್ಯಾಸಕ್ಕಾಗಿ ಅಭ್ಯರ್ಥಿಯನ್ನು ಪರೀಕ್ಷಿಸಲು ಇಂಗ್ಲೀಷ್‌ನ್ನು ಒಂದು ಪತ್ರಿಕೆಯನ್ನಾಗಿ ಪ್ರವೇಶ ಪ್ರಕ್ರಿಯೆಯಲ್ಲಿ ಸೇರ್ಪಡೆ ಮಾಡಲಾಗಿದೆ. ವರದಿಯಾದ ***ಟಿಎಂಎ ಪೈ ಫೌಂಡೇಶನ್ –ವಿರುದ್ಧ– ಕರ್ನಾಟಕ ರಾಜ್ಯ*** [1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಉಲ್ಲೇಖಿಸುತ್ತಾ, ಕಾಮೆಡ್‌ಕೆ ಆಯ್ಕೆ ಪ್ರಕ್ರಿಯೆಯು ಮೂರು ರೀತಿಯ ಪರೀಕ್ಷಾ ಮಾನದಂಡಗಳನ್ನು ಅಂದರೆ, ಮೆರಿಟ್ ಆಧಾರಿತ ಪ್ರವೇಶದ ನ್ಯಾಯಸಮ್ಮತ, ಪಾರದರ್ಶಕ ಮತ್ತು ಶೋಷಣೆರಹಿತ

1. (2002) 8 ಎಸ್‌ಸಿಸಿ 481

ಮಾನದಂಡಗಳನ್ನು ಅನುಸರಿಸಿದೆಯೆಂದು ಖಚಿತಪಡಿಸುತ್ತದೆಂದು ಹೇಳಲಾಗಿದೆ. ಕಾನೂನಿನಲ್ಲಿ ಅನುಮತೀಯವಾದ ಇನ್ನೂ ಉತ್ತಮ ಮೆರಿಟ್ ಆಧಾರಿತ ಆಯ್ಕೆಯನ್ನು ಖಚಿತಪಡಿಸುವುದರ ಮುಂದುವರಿಕೆಯಾಗಿ ಮೂರು ಪರೀಕ್ಷಾ ಮಾನದಂಡಗಳ ಬಗ್ಗೆ ವಿದ್ಯಾರ್ಥಿಗಳಿಗೆ ಖಚಿತಪಡಿಸುವ ಕಾರ್ಯವಿಧಾನವನ್ನು ಕಾಮೆಡ್‌ಕೆ ಉಪಬಂಧಿಸಿದೆ. ಪ್ರತ್ಯರ್ಜಿದಾರರು ಗೊತ್ತುಪಡಿಸಿದ ಅರ್ಹತಾ ಮಾನದಂಡಗಳು ಪ್ರವೇಶ ಪ್ರಕ್ರಿಯೆಗಾಗಿ ಉಪಬಂಧಿಸುವಲ್ಲಿನ ಕನಿಷ್ಠ ಪ್ರಮಾಣಕಗಳ ನಿಗದಿ ಹಾಗೂ ಅಗತ್ಯತೆಗೆ ತಕ್ಕಂತೆ ಹೊಂದಿಕೆಯಾಗಿವೆಯೆಂದು ಹೇಳಲಾಗಿದೆ.

6. ಅವರು ಈ ದಿನ ಹೆಚ್ಚುವರಿ ಹೇಳಿಕೆಯನ್ನು ಸಲ್ಲಿಸಿದ್ದಾರೆ. ಪರೀಕ್ಷಾ ಮಾದರಿ, ಗರಿಷ್ಠ ಅಂಕಗಳು ಮತ್ತು ಪರೀಕ್ಷಾ ಅವಧಿಯೊಂದಿಗೆ 11 ಪರೀಕ್ಷಾ ಏಜೆನ್ಸಿ ಹೆಸರುಗಳನ್ನು ರೂಪಿಸಿದ ನಂತರ, ಪ್ರತಿಯೊಂದು ಪರೀಕ್ಷಾ ಏಜೆನ್ಸಿಯು ತನ್ನ ವಿಶಿಷ್ಟ ಮಾದರಿಯನ್ನು ಅನುಸರಿಸುತ್ತದೆಯೆಂದು ಹೇಳಲಾಗಿದೆ. ಕರ್ನಾಟಕ ವೃತ್ತಿಪರ ಶೈಕ್ಷಣಿಕ ಸಂಸ್ಥೆ [ಪ್ರವೇಶದ ವಿನಿಯಮನ ಮತ್ತು 'ಸಿಇಟಿ' ಯ ನಿರ್ಧಾರ] ಅಧಿನಿಯಮ, 2006 ರ 2(1)(i) ನೇ ಪ್ರಕರಣವು, ರಾಜ್ಯದಲ್ಲಿನ ಕಾಲೇಜುಗಳಲ್ಲಿ ಒಪ್ಪಿಗೆಯ ಒಪ್ಪಂದದ ಅನುಸಾರವಾಗಿ, ರಾಜ್ಯ ಸರ್ಕಾರದಿಂದ ಅಧಿಸೂಚಿಸಬಹುದಾದ ಖಾಸಗಿ ವೃತ್ತಿಪರ ಸಂಸ್ಥೆಯಲ್ಲಿರುವಂತೆ ಮುಖ್ಯ ವಿಷಯಗಳನ್ನು ಪರಿಭಾಷಿಸುತ್ತದೆ. ಅವು ಖಾಸಗಿ ಸಂಸ್ಥೆಗಳಾಗಿರುವುದರಿಂದ ಒಮ್ಮೆ ಸೀಟುಗಳ ಅಂಥ ಶೇಕಡಾವಾರುಗಳನ್ನು ಸರ್ಕಾರಕ್ಕೆ ಹಸ್ತಾಂತರಿಸಿದರೆ, ಸರ್ಕಾರವು ಅಧಿನಿಯಮದ 3(6) ನೇ ಪ್ರಕರಣದ ಉಪಬಂಧಗಳನ್ನು ಅನುಸರಿಸುತ್ತದೆ. ಪ್ರವೇಶ ಪರೀಕ್ಷೆಯನ್ನು ಒಂದು ನಿರ್ದಿಷ್ಟ ಪರೀಕ್ಷಾ ಮಾದರಿಯನ್ನು ಅಂಗೀಕರಿಸಿ, ನಡೆಸತಕ್ಕದ್ದೆಂದು ರಾಜ್ಯಸರ್ಕಾರಕ್ಕೆ ನಿರ್ದೇಶಿಸಲು ಖಾಸಗಿ ಸಂಸ್ಥೆಗಳಿಗೆ ಅಧಿಕಾರವಿಲ್ಲ. 2006 ರ 8ನೇ ಅಧಿನಿಯಮದ 4ನೇ ಪ್ರಕರಣವು, ಅನುದಾನರಹಿತ ಸಂಸ್ಥೆಗಳಲ್ಲಿ ಪ್ರವೇಶದ ವಿಧಾನವನ್ನು ರೂಪಿಸುತ್ತದೆ. ಸದರಿ ಉಪಬಂಧದ ಅನುಸಾರ, ಒಂದು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ರಾಜ್ಯಮಟ್ಟದಲ್ಲಿ ನಡೆಸತಕ್ಕದ್ದು ಹಾಗೂ ಅಧಿನಿಯಮದ 5ನೇ ಪ್ರಕರಣದಡಿ ನೇಮಿಸಲಾದ ಪ್ರವೇಶ ಪರಿಶೀಲನಾ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ, ಏಕಗವಾಕ್ಷಿಯ

ಮುಖಾಂತರ ಕೇಂದ್ರೀಕೃತ ಸಮಾಲೋಚನೆ (ಕೌನ್ಸ್‌ಲಿಂಗ್) ಮೂಲಕ ಅನುಸರಿಸತಕ್ಕದ್ದು. ಉಚ್ಚ ನ್ಯಾಯಾಲಯದ ಸನ್ಮಾನ್ಯ ನಿವೃತ್ತ ನ್ಯಾಯಾಧೀಶರು ಪ್ರವೇಶ ಪರಿಶೀಲನಾ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಇದರಲ್ಲಿ ಪ್ರತ್ಯರ್ಜಿದಾರರು ಅಂಗೀಕರಿಸಿದ ಪರೀಕ್ಷಾ ಮಾದರಿಯನ್ನು ಪ್ರವೇಶ ಪರಿಶೀಲನಾ ಸಮಿತಿಯು ಆಕ್ಷೇಪಿಸಿಲ್ಲ ಮತ್ತು ಅದಕ್ಕೆ ವಿರುದ್ಧವಾಗಿ, ಮೀಸಲಾತಿಯಿಲ್ಲದೆ ಕಳೆದ 3 ವರ್ಷಗಳಲ್ಲಿ ಇದನ್ನು ಅನುಸರಿಸಲಾಗಿದೆ. ಅಧಿನಿಯಮದ 5(7) ನೇ ಪ್ರಕರಣವು, ಪ್ರವೇಶ ಪರೀಕ್ಷೆಯನ್ನು ನಡೆಸುವಾಗ ಖಾಸಗಿ ಕಾಲೇಜುಗಳ ಸಂಘವು ಅನುಸರಿಸಬೇಕಾದ ಮಾನದಂಡಗಳನ್ನು ಹಾಗೂ ಕಾರ್ಯವಿಧಾನವನ್ನು ಉಲ್ಲೇಖಿಸುತ್ತದೆ. ಖಾಸಗಿ ವೃತ್ತಿಪರ ಸಂಸ್ಥೆಗಳೂ ***ಟಿಎಂಎ ಪೈ ಫೌಂಡೇಶನ್ –ವಿರುದ್ಧ– ಕರ್ನಾಟಕ ರಾಜ್ಯ*** – ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಪ್ರತಿಪಾದಿಸಿದ ಕಾನೂನನ್ನು ಅನುಸರಿಸುತ್ತವೆ. ಆದುದರಿಂದ, ಒಂದು ಕಾಲೇಜಿನಲ್ಲಿ ವೃತ್ತಿಪರ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಕೋರುವಂಥ ಮೂರು ವಿವಿಧ ಮೂಲಗಳಿರುತ್ತವೆ. ಅವು ಯಾವುವೆಂದರೆ;

(ಎ) 2006ರ 8ನೇ ಅಧಿನಿಯಮದ 3(6)ನೇ ಪ್ರಕರಣದ ಬೆಳಕಿನಲ್ಲಿ ಸರ್ಕಾರಿ ಕೋಟಾದಿಂದ;

(ಬಿ) 2006ರ 8ನೇ ಅಧಿನಿಯಮದ 5(7)ನೇ ಪ್ರಕರಣದೊಂದಿಗೆ ಓದಲಾದ 4ನೇ ಪ್ರಕರಣದ ಬೆಳಕಿನಲ್ಲಿ, ಅಭ್ಯರ್ಥಿಗಳ ಮೆರಿಟ್‌ಅನ್ನು ನಿರ್ಧರಿಸುವ ಕಾಮೆಡ್‌ಕೆದಿಂದ; ಮತ್ತು

(ಸಿ) ಗೌರವಾನ್ವಿತ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವು ಅನುಮತಿಸಿರುವಂತೆ, ಯಾವುದೇ ಪ್ರವೇಶ ಪರೀಕ್ಷೆಯಿಲ್ಲದ ಅನಿವಾಸಿ ಭಾರತೀಯ ಕೋಟಾ.

7. ಹೀಗಾಗಿ, ಈ ಮೂರು ಮೂಲಗಳು ಪರಸ್ಪರ ಸ್ವತಂತ್ರವಾದ ಮತ್ತು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸಂಸ್ಥೆಗಳಿಗೆ ಪ್ರವೇಶ ಕೋರುವ ಅರ್ಹ ಅಭ್ಯರ್ಥಿಗಳನ್ನು ಲಭ್ಯವಾಗುವಂತೆ ಮಾಡುತ್ತದೆಯೆಂದು ಕಂಡುಬರುತ್ತದೆ. ಈ ಮೂಲಗಳ ಮುಖಾಂತರ ಮಾಡಲಾದ ಪ್ರವೇಶಗಳನ್ನು ಅಂಗೀಕೃತ ವಿಶ್ವವಿದ್ಯಾನಿಲಯವು ಮತ್ತು ಇತರ ವಿನಿಯಮನ ಸಂಸ್ಥೆಗಳು ಅನುಮೋದಿಸಿವೆ. ಪ್ರತ್ಯರ್ಜಿದಾರರು ಗೊತ್ತುಪಡಿಸಿದ, ಈ ಮೇಲೆ ಹೇಳಲಾದ ಪರೀಕ್ಷೆಯು ವಿವಿಧ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಗುಣಮಟ್ಟ ಹಾಗೂ ಮಾನದಂಡಗಳ ಸುಧಾರಣೆಗಾಗಿ ಇರುವುದಾಗಿದೆ. ಆದುದರಿಂದ, 2008 ರ ವರ್ಷದಿಂದ ಮುಂದಕ್ಕೆ ಕರ್ನಾಟಕದ ಹೊರಗಿನ ವಿದ್ಯಾರ್ಥಿಗಳ ಇಂಗ್ಲೀಷ್ ಗುಣಮಟ್ಟ ಬಹಳ ಕಡಿಮೆ ದರ್ಜೆಯದಾದ ಕಾರಣ ಇಂಗ್ಲೀಷನ್ನು ಕಡ್ಡಾಯ ವಿಷಯವನ್ನಾಗಿ ಪರಿಚಯಿಸಲಾಯಿತು. ಇದು ಆರ್‌ಜಿಯುಎಚ್‌ಎಸ್ ಪರೀಕ್ಷೆಯಲ್ಲಿ ಅವರ ಕಡಿಮೆ ದರ್ಜೆಯ ಫಲಿತಾಂಶದ ಕಾರಣದಿಂದಾದುದಾಗಿದೆ. ಕೆಪಿಸಿಎಫ್ ಅಸೋಸಿಯೇಷನ್‌ನ ಎಲ್ಲಾ ವೃತ್ತಿಪರ ಕಾಲೇಜುಗಳಲ್ಲಿ ಬೋಧನೆಯ ಭಾಷೆ ಇಂಗ್ಲೀಷ್ ಆಗಿದೆ. ವೈದ್ಯಕೀಯ ಕೋರ್ಸು ಬೇರೆಯದಕ್ಕೆ ಹೋಲಿಸಿದರೆ, ಅರ್ಹತಾ ಪರೀಕ್ಷೆ ಮತ್ತು ಪ್ರವೇಶ ಪರೀಕ್ಷೆಯ ಮಟ್ಟದಲ್ಲಿ, ಇಂಗ್ಲೀಷ್‌ನಲ್ಲಿ ಯುಕ್ತ ಪ್ರಾವೀಣ್ಯವನ್ನು ಅಪೇಕ್ಷಿಸುತ್ತದೆ ಹಾಗೂ ಇನ್ನೂ ಉತ್ತಮ ಮೆರಿಟ್ ಆಧಾರಿತ ಆಯ್ಕೆಯನ್ನು ಖಚಿತಪಡಿಸುವುದರ ಮುಂದುವರಿಕೆಯಾಗಿ, ವೈದ್ಯಕೀಯ ಕಾಲೇಜಿಗೆ ಪ್ರವೇಶ ಕೋರುವ ವಿದ್ಯಾರ್ಥಿಗಳ ಗುಣಮಟ್ಟ ಪರೀಕ್ಷಿಸಲು, ಅದರ ಪ್ರವೇಶ ಪ್ರಕ್ರಿಯೆಯಲ್ಲಿ ಇಂಗ್ಲೀಷನ್ನು ಒಂದು ವಿಷಯವನ್ನಾಗಿ ಸೇರಿಸಬೇಕಿದೆ. ತದನುಸಾರವಾಗಿ, ಕಾಮೆಡ್‌ಕೆ ಅಂಡರ್‌ಗ್ರಾಜುಯೇಟ್ ಮೆಡಿಕಲ್ ಎಂಟ್ರೆನ್ಸ್ ಟೆಸ್ಟ್–2015 ರಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳನ್ನು ಹೊರತುಪಡಿಸಿ, ವಿದ್ಯಾರ್ಥಿಯ ಭಾಷಾಭ್ಯಾಸ, ಪದಗಳ ರಚನೆ, ವಾಕ್ಯಾಂಗ, ಖಂಡಗಳು ಮತ್ತು ವಾಕ್ಯಗಳ ರಚನೆಯನ್ನು ಪರೀಕ್ಷಿಸಲು ಇಂಗ್ಲೀಷ್ ಭಾಷೆಯಲ್ಲಿ ಒಂದು ಭಾಷಾವಿಷಯವನ್ನು ಸೇರಿಸಲಾಗಿದೆ.

8. ಇಂಗ್ಲೀಷ್‌ನಲ್ಲಿ ಕಡಿಮೆ ಅಂಕಗಳನ್ನು ಗಳಿಸಿರುವ ಕಾರಣದಿಂದಾಗಿ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ಅರ್ಹರಾಗಲು ವಿಫಲರಾಗಿದ್ದಾರೆ. ಪರೀಕ್ಷೆ

ತೆಗೆದುಕೊಂಡ ಒಟ್ಟು 57,885 ಅಭ್ಯರ್ಥಿಗಳ ಪೈಕಿ, 4,926 ಅಭ್ಯರ್ಥಿಗಳು ಅನುತ್ತೀರ್ಣರಾಗಿದ್ದು, ಅವರಿಗೆ ರ್‍ಯಾಂಕನ್ನು ನೀಡಲಾಗಿಲ್ಲ ಅಥವಾ ರ್‍ಯಾಂಕ್ ಹಂಚಿಕೆ ಮಾಡಿರುವುದಿಲ್ಲ. ಅಭ್ಯರ್ಥಿಯು ಪರೀಕ್ಷೆಯಲ್ಲಿ ಭಾಗವಹಿಸಿದ ನಂತರ, ಸದರಿ ಪರೀಕ್ಷೆಯಲ್ಲಿ ಅನುತ್ತೀರ್ಣನಾದನೆಂದು ತಿಳಿದ ನಂತರ ಯಾವುದೇ ಷರತ್ತನ್ನು ಪ್ರಶ್ನಿಸುವಂತಿಲ್ಲವೆಂಬುದು ಕಾನೂನಿನ ಸ್ಥಾಪಿತ ನಿಯಮವಾಗಿದೆಯೆಂದು ಸಹ ವಾದಿಸಲಾಗಿದೆ. ವಿಬಂಧದ ನಿಯಮವನ್ನು ಸಹ ಈ ಮೇಲಿನ ಪ್ರಕರಣದಲ್ಲಿ ನ್ಯಾಯವಾಗಿ ಅನ್ವಯಿಸಲಾಗಿದೆ. ಈ ಆಧಾರವೊಂದರಿಂದಲೇ, ರಿಟ್ ಅರ್ಜಿಯು ರದ್ದುಪಡಿಸಲು ತಕ್ಕದ್ದಾಗಿದೆ ಮತ್ತು ಆದುದರಿಂದ ಅವರು ರಿಟ್ ಅರ್ಜಿಯನ್ನು ರದ್ದುಗೊಳಿಸಲು ಕೋರಿದ್ದಾರೆ.

9. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಅಜೊಯ್ ಕುಮಾರ್ ಪಾಟೀಲ್ ರವರು, ಪ್ರತ್ಯರ್ಜಿದಾರರ ಪ್ರಶ್ನಿತ ದಾವೆಯನ್ನು ಟೀಕಿಸುತ್ತಾ, ಮೆರಿಟ್ ಆಧಾರದ ಮೇಲೆ ರ್‍ಯಾಂಕನ್ನು ನೀಡುವ ಸಲುವಾಗಿ 'ಪಿಸಿಬಿ' ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ಮಾತ್ರ ಪರಿಗಣಿಸಲಾಗಿದೆ ಮತ್ತು ಇಂಗ್ಲೀಷ್‌ನಲ್ಲಿ ಗಳಿಸಿದ ಅಂಕಗಳನ್ನು ಸೇರಿಸಿರುವುದೇ ಇಲ್ಲ. ಆದುದರಿಂದ ವೃತ್ತಿಪರ ಕಾಲೇಜುಗಳಿಗೆ ಪ್ರವೇಶವನ್ನು ಸಂಪೂರ್ಣವಾಗಿ ಮೆರಿಟ್ ಆಧಾರದ ಮೇಲೆಯೇ ಮಾಡಬೇಕಿದ್ದಾಗ, ಹಾಗೂ ಇಂಗ್ಲೀಷ್‌ನಲ್ಲಿ ಗಳಿಸಿದ ಯಾವುವೇ ಅಂಕಗಳನ್ನು ಮೆರಿಟ್ ನಿರ್ಧರಿಸಲು ಗಣನೆಗೆ ತೆಗೆದುಕೊಂಡಿರದಿದ್ದಲ್ಲಿ, ರ್‍ಯಾಂಕನ್ನು ನೀಡಲು ಇಂಗ್ಲೀಷ್‌ನಲ್ಲಿ ಶೇ. 50 ಅಂಕಗಳನ್ನು ಗಳಿಸಬೇಕೆಂದು ಪೂರ್ವಷರತ್ತಾಗಿ ನಿಗದಿಪಡಿಸಿರುವುದು ನಿರಂಕುಶವಾಗಿದ್ದು, ಆ ಕಾರಣದಿಂದ ಅದು ವಜಾಮಾಡಲು ಯೋಗ್ಯವಾದುದಾಗಿದೆಯೆಂದು ವಾದಿಸಿದ್ದಾರೆ.

10. ಎರಡನೆಯದಾಗಿ, ಪ್ರತ್ಯರ್ಜಿದಾರರಾದ ಕಾಮೆಡ್‌ಕೆ ಯವರ ಆಕ್ಷೇಪಣಾ ಹೇಳಿಕೆಯಿಂದ ಸ್ಪಷ್ಟವಾಗಿರುವಂತೆ, ಅವರು ವಿದ್ಯಾರ್ಥಿಗಳನ್ನು ವಿವಿಧ ಮೂಲಗಳಿಂದ ಎಂದರೆ, ಸಿಇಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ, ಕಾಮೆಡ್‌ಕೆ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮತ್ತು ಯಾವುದೇ ಪ್ರವೇಶ ಪರೀಕ್ಷೆಯಿಲ್ಲದೆ

ಅನಿವಾಸಿ ಭಾರತೀಯ ಕೋಟಾದಿಂದ ಅಂಡರ್ ಗ್ರಾಜುಯೇಟ್ ಪ್ರೊಫೆಷನಲ್ ಕೋರ್ಸ್‌ಗೆ ಸೇರಿಸಿಕೊಳ್ಳುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಒಂದೇ ಕೋರ್ಸಿಗೆ ಒಂದೇ ತರಗತಿಯಲ್ಲಿ ಪ್ರವೇಶ ನೀಡಿರುತ್ತಾರೆ. ಇಂಗ್ಲೀಷ್ ಭಾಷೆಯಲ್ಲಿ ಶೇ. 50 ಗಳಿಸಬೇಕೆಂಬ ಸದರಿ ಅಗತ್ಯತೆಯನ್ನು ಉಳಿದೆರಡು ವರ್ಗದ ವಿದ್ಯಾರ್ಥಿಗಳಿಗೆ ಒತ್ತಾಯಪಡಿಸಿರುವುದಿಲ್ಲ. ಆದುದರಿಂದ ಅವರ ನಡುವೆ, ಭಾರತ ಸಂವಿಧಾನದ ಅನುಚ್ಛೇದ 14 ರ ಬೆಳಕಿನಲ್ಲಿ, ಅನುಮತೀಯವಲ್ಲದ ಭೇದಭಾವವಿದೆಯೆಂದು ಅವರು ವಾದಿಸಿದ್ದಾರೆ.

11. ಮೂರನೆಯದಾಗಿ, ಐಚ್ಛಿಕ ವಿಷಯಗಳಾದ 'ಪಿಸಿಬಿ' ಗಳಿಗೆ ಸಂಬಂಧಿಸಿದ ಪರೀಕ್ಷೆಯನ್ನು ಸಹ ಇಂಗ್ಲೀಷ್ ಭಾಷೆಯಲ್ಲಿ ನಡೆಸಲಾಗಿದೆ. ಯಾರೇ ವಿದ್ಯಾರ್ಥಿಯು ಇಂಗ್ಲೀಷ್ ಭಾಷೆಯಲ್ಲಿ ಚೆನ್ನಾಗಿ ಪ್ರಾವೀಣ್ಯತೆ ಪಡೆದಿದ್ದ ಹೊರತು, ಐಚ್ಛಿಕ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಗಳಿಸುವ ಪ್ರಶ್ನೆಯೇ ಉಂಟಾಗುವುದಿಲ್ಲ. ಐಚ್ಛಿಕ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಗಳಿಸುವುದೇ ರ್‍ಯಾಂಕ್ ನೀಡಲು ಇರುವ ಏಕೈಕ ಮಾನದಂಡವಾಗಿರುವುದರಿಂದ, ಆ ಕಡೆಗೇ ಎಲ್ಲ ಶಕ್ತಿ ಕೇಂದ್ರೀಕೃತಗೊಂಡಿದ್ದು, ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡದಿರಬಹುದು. ರ್‍ಯಾಂಕ್ ನೀಡುವುದಕ್ಕೆ ಅರ್ಹವಾಗುವ ಸಲುವಾಗಿ ಇಂಗ್ಲಿಷ್ ಭಾಷೆಯಲ್ಲಿ ಶೇ. 50 ಅಂಕಗಳನ್ನು ಗಳಿಸುವ ಬಗ್ಗೆ ಒತ್ತಡ ಹೇರುವ ಮೂಲಕ ಯಾವುದೇ ಉದ್ದೇಶ ಸಾಧಿತವಾಗುವುದಿಲ್ಲ. ಅರ್ಜಿದಾರನನ್ನು ಹೊರತುಪಡಿಸುವ ಪ್ರತ್ಯರ್ಜಿದಾರರ ಕ್ರಮ ಕಾನೂನುಬಾಹಿರವಾಗಿದ್ದು, ಅದನ್ನು ತಳ್ಳಿಹಾಕುವ ಅಗತ್ಯತೆಯಿದೆಯೆಂದು ಅವರು ವಾದಿಸಿದ್ದಾರೆ.

12. ಇದಕ್ಕೆ ವಿರೋಧವಾಗಿ, ಕಾಮೆಡ್‌ಕೆ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀಮತಿ ಫರ್‌ಾಫಾತಿಮಾರವರು, ಕಾಮೆಡ್‌ಕೆ ಮತ್ತು ಅದರ ಸಂಯೋಜಿತ ಘಟಕಗಳು ಈ ವೃತ್ತಿಪರ ಕೋರ್ಸುಗಳಿಗೆ ಪ್ರವೇಶಕ್ಕಾಗಿ ಅರ್ಹತೆಯನ್ನು ನಿಗದಿಪಡಿಸುವ ಹಕ್ಕನ್ನು ಹೊಂದಿವೆ. ಅವರು ನಿಗದಿಪಡಿಸುವ ಅರ್ಹತೆಯು ಸರ್ಕಾರ ಅಥವಾ ಇತರ ಉನ್ನತ ಏಜೆನ್ಸಿಯಿಂದ ನಿಗದಿತವಾದದ್ದಕ್ಕಿಂತ

ಮೇಲ್ಪಟ್ಟದ್ದಾಗಿರುತ್ತದೆ. ಲಭ್ಯವಿರುವ ಸೀಟುಗಳ ಸಂಖ್ಯೆ ಕಡಿಮೆಯಿದ್ದು, ಅರ್ಜಿದಾರರ ಸಂಖ್ಯೆ ಹೆಚ್ಚಿದ್ದಾಗ, ವೃತ್ತಿಪರ ಕೋರ್ಸಿನ ಪರೀಕ್ಷೆ ನಡೆಸುವ ಪ್ರಾಧಿಕಾರವು ಹೆಚ್ಚಿನ ಅರ್ಹತೆಯನ್ನು ನಿಗದಿಪಡಿಸಬಹುದು ಎಂಬುದು ಸ್ಥಾಪಿತ ಕಾನೂನಾಗಿದೆ. ವಿಷಯದ ಆ ದೃಷ್ಟಿಯಿಂದ, ಕಾಮೆಡ್‌ಕೆ ನಿಗದಿಪಡಿಸಿದ ಹೆಚ್ಚಿನ ಅರ್ಹತೆಯಲ್ಲಿ ತಪ್ಪು ಹುಡುಕಲಾಗುವುದಿಲ್ಲವೆಂದು ವಾದಿಸಿದ್ದಾರೆ.

13. ಎರಡನೆಯದಾಗಿ, ಕರ್ನಾಟಕದ ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆಯಲ್ಲಿ ಅಷ್ಟೇನೂ ಜ್ಞಾನ ಇಲ್ಲದಿರುವುದು ಕಂಡುಬಂದಿದೆ. ತತ್ಪರಿಣಾಮವಾಗಿ, ಐಚ್ಛಿಕ ವಿಷಯಗಳಲ್ಲೂ ಸಹ ಅವರ ಕಾರ್ಯಕ್ಷಮತೆ ಸಾಕಷ್ಟು ಪರಿಣಾಮಕಾರಿಯಾಗಿಲ್ಲ ಮತ್ತು ಆ ಕಾರಣದಿಂದ ಹಿಂದಿನ ಅನುಭವವನ್ನು ಗಮನದಲ್ಲಿಟ್ಟುಕೊಂಡು, ವೃತ್ತಿಪರ ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಇಂಗ್ಲೀಷ್ ಭಾಷೆಯಲ್ಲಿ ಕನಿಷ್ಠ ಗುಣಮಟ್ಟಕ್ಕಾಗಿ ಆಗ್ರಹಪಡಿಸುವುದು ಅಗತ್ಯವೆಂದು ಕಂಡುಬಂದಿತು. ಆದುದರಿಂದ, 2008ರ ವರ್ಷದಿಂದ ಈ ದಿನದವರೆಗೆ ಈ ಖಂಡವನ್ನು ಸೇರ್ಪಡೆ ಮಾಡಲಾಗಿದ್ದು, ಅದಕ್ಕೆ ಯಾವುದೇ ಆಕ್ಷೇಪವಿರುವುದಿಲ್ಲ. ಸದರಿ ಖಂಡವು ಎಲ್ಲ ವಿನಿಯಮನ ಸಂಸ್ಥೆಗಳಿಂದ ಅನುಮೋದಿತವಾಗಿದೆ. ಇದನ್ನು ಕಾನೂನುಬಾಹಿರವಾಗಿದೆಯೆಂದು ಮತ್ತು ನಿರಂಕುಶವಾಗಿದೆಯೆಂದು ಹೇಳಲಾಗುವುದಿಲ್ಲ ಎಂದು ವಾದಿಸಿದ್ದಾರೆ.

14. ಕೊನೆಯದಾಗಿ, ಈ ನಿಗದಿತ ಷರತ್ತುಗಳ ಬಗ್ಗೆ ಪೂರ್ತಿಯಾಗಿ ತಿಳಿದಿದ್ದೂ ಸಹ ಅರ್ಜಿದಾರರು ಪರೀಕ್ಷೆಯನ್ನು ತೆಗೆದುಕೊಂಡಿದ್ದಾರೆ. ಇಂಗ್ಲೀಷ್ ಭಾಷೆಯಲ್ಲಿ ನಿಗದಿತ ಕನಿಷ್ಟ ಅಂಕಗಳನ್ನು ಗಳಿಸಲು ಅಸಮರ್ಥರಾದ ನಂತರ, ಅವರು ಮತ್ತೆ ಹಿಂದಕ್ಕೆ ಬಂದು ಸದರಿ ಉಪಬಂಧವನ್ನು ಪ್ರಶ್ನಿಸಲು ಸಾಧ್ಯವಿಲ್ಲ. ಸರ್ವೋಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳಿಂದ ನಿರ್ಣಯಿಸಲಾದಂತೆ, ಅವರು ಆ ರೀತಿ ಮಾಡುವುದನ್ನು ತಡೆಯಲಾಗಿದೆಯೆಂದು ಅವರು ವಾದಿಸಿದ್ದಾರೆ. ಆದುದರಿಂದ, ಈ ಅರ್ಜಿಗಳಲ್ಲಿ ಯಾವುದೇ ಹುರುಳಿಲ್ಲ ಹಾಗೂ ತದನುಸಾರವಾಗಿ, ಇದು ವಜಾಗೊಳಿಸಲು ತಕ್ಕದ್ದಾಗಿದೆಯೆಂದು ಅವರು ವಾದಿಸಿದ್ದಾರೆ.

15. ಮೇಲೆ ಹೇಳಲಾದ ಸಂಗತಿಗಳ ಮತ್ತು ಪರಸ್ಪರ ವಿರೋಧದ ವಾದಗಳ ಬೆಳಕಿನಲ್ಲಿ, ನಮ್ಮ ಪರ್ಯಾಲೋಚನೆಗೆ ಬಂದ ಅಂಶ ಹೀಗಿದೆ;

> ಮೆಡಿಕಲ್, ಡೆಂಟಲ್ ಮತ್ತು ಇಂಜಿನಿಯರಿಂಗ್ ಕೋರ್ಸುಗಳ ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಅರ್ಹತಾ ಮಾನದಂಡವಾಗಿ, ಇಂಗ್ಲೀಷ್ ಭಾಷೆಯಲ್ಲಿ ಶೇ. 50 ಅಥವಾ ಸಂದರ್ಭಾನುಸಾರ ಶೇ. 40 ಅಂಕಗಳನ್ನು ನಿಗದಿಪಡಿಸಿ, ಕಾಮೆಡ್‌ಕೆ ಯುಜಿಇಟಿ–2015 ಇವರು ಹೊರಡಿಸಿದ ದಿನಾಂಕ 02.12.2014 ರ ಅಧಿಸೂಚನೆಯ ಎ(ಇ) ಖಂಡವು ನಿರಂಕುಶವಾಗಿ, ತಾರತಮ್ಯವಾಗಿ ಹಾಗೂ ಕಾನೂನುಬಾಹಿರವಾಗಿ ಇದೆಯೇ? ಹಾಗೂ ಇದು ತಳ್ಳಿಹಾಕಲು ತಕ್ಕದ್ದಾಗಿದೆಯೇ?

16. ಅಧಿಸೂಚನೆಯಲ್ಲಿನ ಪ್ರಶ್ನಿತ ಖಂಡವನ್ನು ಈ ಕೆಳಗಿನಂತೆ ಓದಲಾಗುತ್ತದೆ:

> *"(ಎ) (ಇ) ಇಂಗ್ಲೀಷ್ ವಿಷಯವು, ಹಿಂದಿನ ವರ್ಷಗಳಲ್ಲಿದ್ದಂತೆ, ಕಾಮೆಡ್‌ಕೆ ಯುಜಿಇಟಿ–2015ರ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳೊಂದಿಗೆ ಪರೀಕ್ಷಿಸಬೇಕಾದ ಒಂದು ವಿಷಯವಾಗಿದೆ. ಸಾಮಾನ್ಯ ಅರ್ಹತೆಯ ವಿದ್ಯಾರ್ಥಿಗಳು ಶೇ.50ಕ್ಕೆ (ಕರ್ನಾಟಕದ ಪ.ಜಾ., ಪ.ಪಂ. ಮತ್ತು ಇ.ಹಿಂ.ವ. ಗಳ ವಿದ್ಯಾರ್ಥಿಗಳ ವಿಷಯದಲ್ಲಿ ಶೇ.40) ಕಡಿಮೆಯಲ್ಲದ ಅಂಕಗಳನ್ನು ಗಳಿಸತಕ್ಕದ್ದು. ಹಾಗಿದ್ದರೂ, ಇಂಗ್ಲೀಷ್‌ನಲ್ಲಿ ಹಾಗೆ ಗಳಿಸಿದ ಅಂಕಗಳನ್ನು ರ‍್ಯಾಂಕ್ ನಿರ್ಧಾರ ಮಾಡಲು ಸೇರಿಸಿಕೊಳ್ಳುವುದಿಲ್ಲ. ರ‍್ಯಾಂಕನ್ನು ಪಿಸಿಬಿ ವಿಷಯಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಕನಿಷ್ಠ*

*ಅಗತ್ಯತೆಯ ಅಂಕಗಳ ಆಧಾರದ ಮೇಲೆ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು. ಅಲ್ಲದೆ, ಒಬ್ಬ ವಿದ್ಯಾರ್ಥಿ/ನಿ ಇಂಗ್ಲೀಷ್‌ನಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಗಳಿಸಲು ವಿಫಲನಾದಲ್ಲಿ, ಅವನು/ಅವಳು ರ್‍ಯಾಂಕ್‌ಗೆ ಅರ್ಹರಾಗುವುದಿಲ್ಲ. ಇಂಗ್ಲೀಷ್ ಭಾಷಾ ಪತ್ರಿಕೆಯು ಸಾಮಾನ್ಯವಾಗಿ ದ್ವಿತೀಯ ಪಿಯುಸಿ ಅಥವಾ 10+2 ಮಟ್ಟದ್ದಾಗಿರುತ್ತದೆ ಮತ್ತು ಅದು ವಿದ್ಯಾರ್ಥಿಯ ಭಾಷಾಭ್ಯಾಸ, ಪದಗಳ, ನುಡಿಗಟ್ಟುಗಳ, ಖಂಡಗಳ ಹಾಗೂ ವಾಕ್ಯಗಳ ರಚನೆಯನ್ನು ಪರೀಕ್ಷಿಸುತ್ತದೆ."*

17. ಮೆಡಿಕಲ್, ಡೆಂಟಲ್ ಮತ್ತು ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಕ್ಕಾಗಿ ಕಾಮೆಡ್‌ಕೆ ಯುಜಿಇಟಿ–2015 ನ್ನು ನಡೆಸಲು ಹೊರಡಿಸಲಾದ ದಿನಾಂಕ 02.12.2014 ರ ಅಧಿಸೂಚನೆಯು ನ್ಯಾಯಸಮ್ಮತ, ಪಾರದರ್ಶಕ ಹಾಗೂ ಶೋಷಣೆರಹಿತ ಆಯ್ಕೆ ಪ್ರಕ್ರಿಯೆಯ ಮೂರು ವಿಧದ ಪರೀಕ್ಷಾ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ***ಟಿಎಂಎ ಪೈ ಫೌಂಡೇಶನ್ –ವಿರುದ್ಧ– ಕರ್ನಾಟಕ ರಾಜ್ಯ, ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ –ವಿರುದ್ಧ– ಕರ್ನಾಟಕ ರಾಜ್ಯ*** [2], ಹಾಗೂ ***ಪಿ.ಎ. ಇನಾಂದಾರ್ ಮತ್ತು ಇತರರು –ವಿರುದ್ಧ– ಮಹಾರಾಷ್ಟ್ರ ರಾಜ್ಯ*** [3], ಪ್ರಕರಣಗಳಲ್ಲಿ ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಿಂದ ಪರಿಭಾವಿಸಲಾದಂತೆ, ಪ್ರತ್ಯೇಕ ಸಾಮಾನ್ಯ ಪ್ರವೇಶ ಪರೀಕ್ಷೆಯ ನಂತರ ಕೇಂದ್ರೀಕೃತ ಸಮಾಲೋಚನೆಯ ಮುಖಾಂತರ ಮೆರಿಟ್ ಆಧಾರಿತ ಪ್ರವೇಶವನ್ನು ಖಚಿತಪಡಿಸಲು ಪರೀಕ್ಷೆಯನ್ನು ನಡೆಸಲಾಗಿದೆ ಎಂದು ಸ್ಪಷ್ಟವಾಗಿ ನಿರೂಪಿಸಿದೆ. ಅಧಿಸೂಚನೆಯಿಂದ ಕಂಡುಬಂದಿರುವಂತೆ, ಕಾಮೆಡ್‌ಕೆ ಯುಜಿ ಪ್ರವೇಶ ಪರೀಕ್ಷೆ–2015 ರಲ್ಲಿ ಅಭ್ಯರ್ಥಿಯು ವೈದ್ಯಕೀಯ ಸೀಟಿಗೆ ಅರ್ಹನಾಗಲು 'ಪಿಸಿಬಿ' ವಿಷಯಗಳಲ್ಲಿ ಸರಾಸರಿ ಶೇ.50ಕ್ಕೆ (ಕರ್ನಾಟಕದ ಪ.ಜಾ., ಪ.ಪಂ. ಮತ್ತು ಇ.ಹಿಂ.ವ. ಗಳ ಸಂದರ್ಭದಲ್ಲಿ ಶೇ.40)

2. (2003) 6 ಎಸ್‌ಸಿಸಿ 697    3. (2005) 6 ಎಸ್‌ಸಿಸಿ 537

ಕಡಿಮೆಯಲ್ಲದ ಅಂಕಗಳನ್ನು ಗಳಿಸಿರತಕ್ಕದ್ದು. ಪ್ರಶ್ನಿತವಾಗಿರುವ (ಇ) ಖಂಡವು, ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು ರ್‍ಯಾಂಕ್ ನಿರ್ಧಾರ ಮಾಡುವುದಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು, ಅದನ್ನು ಪಿಸಿಬಿ ವಿಷಯಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಕನಿಷ್ಠ ಅಗತ್ಯದ ಅಂಕಗಳ ಆಧಾರದ ಮೇಲೆ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದುದರಿಂದ, ರ್‍ಯಾಂಕನ್ನು ಅಂದರೆ ಮೆರಿಟ್ಟನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳಲ್ಲಿ ಗಳಿಸಿದ ಅಂಕಗಳು ಮಾತ್ರವೇ ಮಾನದಂಡಗಳಾಗಿವೆ. ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳು ವೈದ್ಯಕೀಯ ಕೋರ್ಸಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಯ ಮೆರಿಟ್ ನಿರ್ಧರಿಸುವಲ್ಲಿ ಯಾವುದೇ ಸಂಬಂಧ ಹೊಂದಿಲ್ಲ. ಮೇಲೆ ನಿರೂಪಿಸಲಾದಂತೆ, ಸರ್ವೋಚ್ಚ ನ್ಯಾಯಾಲಯದ, ಮೇಲೆ ಉಲ್ಲೇಖಿಸಲಾದ ತೀರ್ಪನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಈ ಪರೀಕ್ಷೆಯನ್ನು ನಿಗದಿಗೊಳಿಸಲಾಗಿದೆ. ಆದುದರಿಂದ, ಪಕ್ಷಕಾರರ ವಾದವನ್ನು ಸೂಕ್ತ ಮುನ್ನೋಟದಲ್ಲಿ ವಿವೇಚಿಸುವ ಸಲುವಾಗಿ ಸರ್ವೋಚ್ಚ ನ್ಯಾಯಲಯದಿಂದ ವಿಧಿಸಲಾದ ಕಾನೂನನ್ನು ಪರಿಶೀಲಿಸುವ ಅಗತ್ಯವಿದೆ. ***ಟಿಎಂಎ ಪೈ ಫೌಂಡೇಶನ್*** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಕಂಡಿಕೆ 58 ಮತ್ತು 59 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

> *"ಯಾವುದೇ ವೃತ್ತಿಪರ ಸಂಸ್ಥೆಗೆ ಪ್ರವೇಶ ಪಡೆಯಲು ಮೆರಿಟ್ ಮುಖ್ಯಪಾತ್ರ ವಹಿಸಬೇಕು. ಒಂದು ಶಿಕ್ಷಣ ಸಂಸ್ಥೆಗೆ ಪ್ರವೇಶ ಕೋರುವುದಕ್ಕೆ ಅರ್ಜಿದಾರನ ಮೆರಿಟ್‌ಅನ್ನು ತೀರ್ಮಾನಿಸಲು ಸಾಮಾನ್ಯವಾಗಿ ಸಾಧ್ಯವಾಗದಿದ್ದಾಗ, ವೃತ್ತಿಪರ ಸಂಸ್ಥೆಗೆ ಪ್ರವೇಶ ಕೋರುವಾಗ ಮತ್ತು ಸಮರ್ಥ ವೃತ್ತಿಪರರಾಗಲು, ಮೆರಿಟ್ ಅಭ್ಯರ್ಥಿಗಳನ್ನು ಅನ್ಯಾಯವಾಗಿ ನಡೆಸಿಕೊಳ್ಳದಿರುವ ಅಥವಾ ಕಡಿಮೆ ಮೆರಿಟ್, ಆದರೆ ಹೆಚ್ಚು ಪ್ರಭಾವ ಹೊಂದಿರುವ ಅರ್ಜಿದಾರರಿಗೆ ಆದ್ಯತೆಗಳನ್ನು ನೀಡುವ ಮೂಲಕ ಅನಾನುಕೂಲ ಉಂಟು ಮಾಡದಿರುವ ಅಗತ್ಯವಿದೆ. ವೃತ್ತಿಪರ ಶಿಕ್ಷಣದಲ್ಲಿ ಶ್ರೇಷ್ಠತೆಯು, ಪ್ರವೇಶ*

*ಕೋರುವ ವಿದ್ಯಾರ್ಥಿಯ ಮೆರಿಟ್‌ನ ಮೇಲೆ ಹೆಚ್ಚಿನ ಒತ್ತು ನೀಡುವುದನ್ನು ಅಗತ್ಯಪಡಿಸುತ್ತದೆ. ಅನುದಾನರಹಿತ ಸಂಸ್ಥೆಗಳಿಗೆ ಪ್ರವೇಶಾವಕಾಶಗಳ ಸಂದರ್ಭದಲ್ಲಿ, ಈ ತೀರ್ಪಿನಲ್ಲಿ ಮಾಡಲಾದ ಇತರ ಅಭಿಪ್ರಾಯೋಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಈ ಉದ್ದೇಶಕ್ಕಾಗಿ ಸೂಕ್ತ ವಿನಿಯಮಗಳನ್ನು ಮಾಡತಕ್ಕದ್ದು.*

*ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಮೂಲಕವಾಗಲಿ ಅಥವಾ ಸಂದರ್ಶನದ ನಂತರ ಶಿಕ್ಷಣ ಸಂಸ್ಥೆಯನ್ನು ಬಿಡುವ ಪ್ರಮಾಣಪತ್ರದ ಹಂತದಲ್ಲಾಗಲಿ ಅಥವಾ ಸಂಸ್ಥೆಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ, ಅಥವಾ ವೃತ್ತಿಪರ ಕಾಲೇಜುಗಳ ಸಂದರ್ಭದಲ್ಲಿ ಸರ್ಕಾರಿ ಏಜೆನ್ಸಿಗಳ ಮೂಲಕವಾಗಲಿ, ವೃತ್ತಿಪರ ಹಾಗೂ ಉನ್ನತ ಶಿಕ್ಷಣ ಕಾಲೇಜುಗಳಿಗೆ ಪ್ರವೇಶಕ್ಕಾಗಿ ಸಾಮಾನ್ಯವಾಗಿ ಮೆರಿಟ್‌ಅನ್ನು ನಿರ್ಧರಿಸಲಾಗಿದೆ."*

18. ಮತ್ತೆ ***ಪಿ.ಎ. ಇನಾಂದಾರ್*** ಪ್ರಕರಣದಲ್ಲಿ ಕಂಡಿಕೆ 107ರಲ್ಲಿ ಈ ಮುಂದಿನಂತೆ ನಿರ್ಣಯಿಸಲಾಗಿದೆ:

*"ಉನ್ನತ ಶಿಕ್ಷಣವನ್ನು ಅಂದರೆ ಪದವಿ ಮಟ್ಟ ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ನಿರ್ದಿಷ್ಟವಾಗಿ ತಾಂತ್ರಿಕ ಅಥವಾ ವೃತ್ತಿಪರದಂತಹ ವಿಶೇಷ ಶಿಕ್ಷಣವನ್ನು ನೀಡುವ ಶಿಕ್ಷಣ ಸಂಸ್ಥೆಗಳು ಪ್ರತ್ಯೇಕ ವರ್ಗವನ್ನು ರೂಪಿಸುತ್ತವೆ. ಸಾಂವಿಧಾನಿಕ ಮಹತ್ವದ ವಿಷಯಗಳನ್ನು ನಿರ್ಣಯಿಸಲು ಪ್ರಾರಂಭಿಸಿದಾಗ, ಸಂವಿಧಾನದ ಪದಶಃ*

*ಅರ್ಥವು ಸ್ಪಷ್ಟವಾಗದಿದ್ದಾಗ, ಅದರ ಇಡೀ ಯೋಜನೆಯಿಂದ ವಿವರಿಸಲಾದಂತೆ ಸಂವಿಧಾನದ ಭಾವಶಃ ಅರ್ಥವನ್ನು ಪರಿಗಣಿಸಬೇಕಾಗುತ್ತದೆ. ವೃತ್ತಿಪರ ಅಥವಾ ತಾಂತ್ರಿಕ ಅರ್ಹತೆಗಳನ್ನು ನೀಡುವತ್ತ ಗುರಿ ಮಾಡಿದ ಶಿಕ್ಷಣವು, ಇತರ ಶಿಕ್ಷಣದಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಇತರ ಉಪಬಂಧಗಳನ್ನು ಹೊರತುಪಡಿಸಿ, ಅನುಚ್ಛೇದ 19(6) ಸ್ಪಷ್ಟ ಸೂಚಕವಾಗಿದೆ ಮತ್ತು ಅನುಚ್ಛೇದ 51–ಎ ಯಲ್ಲಿನ (ಎಚ್) ಹಾಗೂ (ಜೆ) ಖಂಡಗಳು ಸಹ ಅದೇ ರೀತಿ ಇವೆ. ಅಂಡರ್ ಗ್ರಾಜುಯೇಟ್–ಲೆವೆಲ್‌ವರೆಗಿನ ಶಿಕ್ಷಣವು ವಿದ್ಯಾರ್ಥಿಯ ಜ್ಞಾನವನ್ನು ವೃದ್ಧಿಗೊಳಿಸಿ, ವ್ಯಕ್ತಿತ್ವವನ್ನು ರೂಪಿಸುತ್ತದೆ. ಗ್ರಾಜುಯೇಟ್–ಲೆವೆಲ್ ಶಿಕ್ಷಣವು ವೃತ್ತಿಪರ ಅಥವಾ ತಾಂತ್ರಿಕ ಅಥವಾ ಇತರ ಉನ್ನತ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಮುಕ್ತ ಅವಕಾಶ ನೀಡುತ್ತದೆ ಮತ್ತು ಆ ಕಾರಣದಿಂದ, ಆ ಮಟ್ಟದಲ್ಲಿ, ವೃತ್ತಿಪರ ಅಥವಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಬರುವ ಸೂಕ್ತರಾದವರಿಗೆ ಪರಿಗಣನೆಗಳು ಸಮಾನ ಹಾಗೂ ಸುಸಂಬದ್ಧವಾಗುತ್ತವೆ. ಇದನ್ನು ರಾಷ್ಟ್ರದ ಹಿತದೃಷ್ಟಿಯಿಂದ ಮಾಡಲಾಗಿದ್ದು, ಶಿಕ್ಷಣವೂ ಸೇರಿದಂತೆ ರಾಷ್ಟ್ರೀಯ ಸಂಪತ್ತನ್ನು ಸಮೃದ್ಧಗೊಳಿಸುತ್ತದೆ. ಅಂಡರ್ ಗ್ರಾಜುಯೇಟ್ ಲೆವೆಲ್‌ವರೆಗಿನ ಶಿಕ್ಷಣ ಒಂದು ಕಡೆಯಾದರೆ, ಗ್ರಾಜುಯೇಟ್ ಮತ್ತು ಪೋಸ್ಟ್ ಗ್ರಾಜುಯೇಟ್ ಶಿಕ್ಷಣದಲ್ಲಿ ಹಾಗೂ ವೃತ್ತಿಪರ ಮತ್ತು ತಾಂತ್ರಿಕ ಸಂಸ್ಥೆಗಳು ಮತ್ತೊಂದು ಕಡೆಯಿದ್ದು, ಒಂದೇ ರೀತಿಯಿರದ ಪರಿಗಣನೆಗಳನ್ನು ಆಹ್ವಾನಿಸುವ ವಿವಿಧ ಮಟ್ಟಗಳ ಆಧಾರದ ಮೇಲೆ ಪರಿಗಣಿಸಬೇಕಾಗಿರುವುದು ಪೈ ಫೌಂಡೇಶನ್ ನಂತರ ಯಾವುದೇ ಹೆಚ್ಚಿನ ಚರ್ಚೆಗೆ ಆಸ್ಪದವಿಲ್ಲದ*

> *ಪ್ರಸ್ತಾವವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಶಾಸನಗಳು ಸ್ಥಾನಪಡೆದಿದ್ದು, ಅವುಗಳ ಸಾಂವಿಧಾನಿಕ ಸಿಂಧುತ್ವವನ್ನು ಪರೀಕ್ಷಿಸಲಾಗಿದೆ ಹಾಗೂ ಅಂಗೀಕರಿಸಲಾಗಿದೆ. ಅವು, ಅಂಡರ್‌ಗ್ರಾಜುಯೇಟ್ ಲೆವೆಲ್‌ವರೆಗಿನ ಶಿಕ್ಷಣಕ್ಕಾಗಿ ಮಾನ್ಯತೆ ಅಥವಾ ಸ್ವೀಕಾರ ಕಡ್ಡಾಯವಲ್ಲದಿದ್ದಾಗ, ಅಥವಾ, ಅಗತ್ಯವಿದ್ದಲ್ಲಿ ಸಹ, ಅದನ್ನು ದಿನನಿತ್ಯದ ವಿಷಯವಾಗಿ ನೀಡಬಹುದಾಗಿದೆ. ತಾಂತ್ರಿಕ ಅಥವಾ ವೃತ್ತಿಪರ ಶಿಕ್ಷಣ ವಿಷಯಗಳಲ್ಲಿ ಗ್ರಾಜುಯೇಟ್ ಅಥವಾ ಪೋಸ್ಟ್ ಗ್ರಾಜುಯೇಟ್ ಡಿಗ್ರಿಗಳು, ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಮತ್ತು ಡಿಗ್ರಿಗಳನ್ನು ನೀಡುವ ಶಿಕ್ಷಣ ಸಂಸ್ಥೆಗಳ ವಿಷಯಕ್ಕೆ ಬಂದಾಗ, ಮಾನ್ಯತೆ ಅಥವಾ ಸ್ವೀಕಾರ ಕಡ್ಡಾಯವಾಗಿದೆ ಹಾಗೂ ತೀವ್ರ ಪರಿಷ್ಕರಣೆಗೆ ಒಳಪಡುತ್ತದೆಯೆಂದು ಸೂಚಿಸುತ್ತವೆ. ಇಂತಹ ಕೆಲವು ಶಾಸನಗಳು ನ್ಯಾಯಮೂರ್ತಿ ಎಸ್.ಬಿ.ಸಿನ್ಹಾ ರವರ 'ಒಪೀನಿಯನ್ ಇನ್ ಇಸ್ಲಾಮಿಕ್ ಅಕಾಡೆಮಿ'ಯ ಕಂಡಿಕೆ 81 ಹಾಗೂ 82 ರಲ್ಲಿ ಉಲ್ಲೇಖವಾಗಿರುವುದು ಕಂಡುಬಂದಿದೆ."*

19. ಮೇಲೆ ಹೇಳಲಾದ, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಂದ ಕಾನೂನು ಈಗ ಸುಸ್ಥಾಪಿತವಾಗಿದೆ. ವೃತ್ತಿಪರ ಶಿಕ್ಷಣದಲ್ಲಿ ಉತ್ಕೃಷ್ಟತೆಯು, ಪ್ರವೇಶ ಕೋರುವ ವಿದ್ಯಾರ್ಥಿಯ ಮೆರಿಟ್‌ನ್ನು ಸಾಮಾನ್ಯವಾಗಿ ಸಂಸ್ಥೆಯು ಅಥವಾ ವೃತ್ತಿಪರ ಕಾಲೇಜುಗಳ ಸಂದರ್ಭದಲ್ಲಿ ಸರ್ಕಾರಿ ಏಜೆನ್ಸಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ನಿರ್ಧರಿಸುತ್ತವೆ. ತಾಂತ್ರಿಕ ಅಥವಾ ವೃತ್ತಿಪರ ಶಿಕ್ಷಣದಂತಹ ಉನ್ನತ ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆಗಳು ಪ್ರತ್ಯೇಕ ವರ್ಗವನ್ನು ರೂಪಿಸುತ್ತವೆ. ವೃತ್ತಿಪರ ಅಥವಾ ತಾಂತ್ರಿಕ ಅರ್ಹತೆಗಳನ್ನು ನೀಡುವತ್ತ ಗುರಿ ಮಾಡಿದ ಶಿಕ್ಷಣವು ಇತರ ಶಿಕ್ಷಣದಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಅಂಡರ್ ಗ್ರಾಜುಯೇಟ್ ವರೆಗಿನ

ಶಿಕ್ಷಣವು ವಿದ್ಯಾರ್ಥಿಯ ಜ್ಞಾನವನ್ನು ವೃದ್ಧಿಸುವ ಹಾಗೂ ವ್ಯಕ್ತಿತ್ವವನ್ನು ರೂಪಿಸುವ ಅರಿವು ಮೂಡಿಸುವತ್ತ ಗುರಿಮಾಡಿರುತ್ತದೆ. ಗ್ರಾಜುಯೇಟ್ ಲೆವೆಲ್ ಶಿಕ್ಷಣವು ವೃತ್ತಿಪರ ಅಥವಾ ತಾಂತ್ರಿಕ ಅಥವಾ ಇತರ ಉನ್ನತ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಮುಕ್ತ ಅವಕಾಶ ನೀಡುತ್ತದೆ. ಆದುದರಿಂದ, ಆ ಮಟ್ಟದಲ್ಲಿ, ವೃತ್ತಿಪರ ಅಥವಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಬರುವ ಸೂಕ್ತರಾದವರಿಗೆ ಪರಿಗಣನೆಗಳು ಸಮಾನ ಹಾಗೂ ಸುಸಂಬದ್ಧವಾಗುತ್ತವೆ. ಇದನ್ನು ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ರಾಷ್ಟ್ರೀಯ ಸಂಪತ್ತನ್ನು ಸಬಲಗೊಳಿಸುವುದಕ್ಕಾಗಿ ಮಾಡಲಾಗಿದೆ. ಅಂಡರ್ ಗ್ರಾಜುಯೇಟ್ ಲೆವೆಲ್‌ವರೆಗಿನ ಶಿಕ್ಷಣ ಒಂದು ಕಡೆಯಾದರೆ, ಗ್ರಾಜುಯೇಟ್ ಮತ್ತು ಪೋಸ್ಟ್ ಗ್ರಾಜುಯೇಟ್ ಲೆವೆಲ್‌ಗಳಲ್ಲಿ ಹಾಗೂ ವೃತ್ತಿಪರ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ ಶಿಕ್ಷಣ ಮತ್ತೊಂದು ಕಡೆಯಿದ್ದು, ಒಂದೇ ರೀತಿಯಿರದ ಪರಿಗಣನೆಗಳನ್ನು ಆಹ್ವಾನಿಸುವ ವಿವಿಧ ಮಟ್ಟಗಳ ಆಧಾರದ ಮೇಲೆ ಪರಿಗಣಿಸಬೇಕಾಗುತ್ತದೆ. ಅಂಡರ್ ಗ್ರಾಜುಯೇಟ್ ಲೆವೆಲ್‌ನ ವಿದ್ಯಾರ್ಥಿಯು ಎಲ್ಲಾ ವಿಷಯಗಳನ್ನು ಓದುತ್ತಾನೆ ಮತ್ತು ಉನ್ನತ ವಿದ್ಯಾಭ್ಯಾಸ ಪಡೆಯುವ ಸಲುವಾಗಿ ಉತ್ತಮ ಶೇಕಡಾವಾರು ಗಳಿಸಬೇಕಿರುತ್ತದೆ. ಹಾಗಿದ್ದರೂ, ಅಂಥ ವಿದ್ಯಾರ್ಥಿ ಯಾವುದೇ ವೃತ್ತಿಪರ ಅಥವಾ ತಾಂತ್ರಿಕ ಕೋರ್ಸನ್ನು ಪಡೆಯಲು ಇಚ್ಛಿಸಿದಲ್ಲಿ, ನಿಯಂತ್ರಿಸುವ ನಿಯಮಗಳು ಸದರಿ ವೃತ್ತಿಪರ ಕೋರ್ಸಿಗೆ ಸೂಕ್ತವಾಗಿ ಪಡೆದ ಅಂಕಗಳ ಮೇಲೆ ಅಂಥ ಪ್ರವೇಶವನ್ನು ಆಗ್ರಹಪಡಿಸುತ್ತವೆ. ಅಂಥ ಐಚ್ಛಿಕ ವಿಷಯಗಳಲ್ಲಿ ಪಡೆದ ಅಂಕಗಳನ್ನು ಮಾತ್ರ ಮೆರಿಟ್ ನಿರ್ಧರಿಸಲು ಗಣನೆಗೆ ತೆಗೆದುಕೊಳ್ಳಲಾಗಿದೆ. ಸಂಸ್ಥೆ ಅಥವಾ ಸರ್ಕಾರ ನಡೆಸುವ ಯಾವುದೇ ಪ್ರವೇಶ ಪರೀಕ್ಷೆಯಿಲ್ಲದೆಯೂ ವಿದ್ಯಾರ್ಥಿಯು ವೃತ್ತಿಪರ ಕೋರ್ಸನ್ನು ಪಡೆಯಲು ಅಪೇಕ್ಷಿಸಿದಲ್ಲಿ ನಿರ್ದಿಷ್ಟ ವಿಷಯದಲ್ಲಿ ತೆಗೆದುಕೊಂಡ ಅಂಕಗಳು ಮಾತ್ರವೇ ಅವನ ರ್‍ಯಾಂಕಿಂಗನ್ನು ನಿರ್ಧರಿಸುತ್ತವೆ. ಆ ಐಚ್ಛಿಕ ವಿಷಯಗಳನ್ನು ಗಳಿಸಿದ ಅಂಕಗಳು ವಿದ್ಯಾರ್ಥಿಗಳ ರ್‍ಯಾಂಕಿಂಗನ್ನು ಮತ್ತು ತತ್ಪರಿಣಾಮವಾಗಿ ಮೆರಿಟ್‌ಅನ್ನು ನಿರ್ಧರಿಸುತ್ತವೆ. ಐಚ್ಛಿಕ ವಿಷಯಗಳಲ್ಲಿ ಗಳಿಸಿದ ಅಂಕಗಳ ಮತ್ತು ವೃತ್ತಿಪರ ಕೋರ್ಸಿಗೆ ಪ್ರವೇಶದ ನಡುವೆ ಸಂಬಂಧವಿದೆ. ಅದು ಅಂಡರ್ ಗ್ರಾಜುಯೇಟ್ ಲೆವೆಲ್‌ನಲ್ಲಿ ಹಾಗೂ ಗ್ರಾಜುಯೇಟ್ ಮತ್ತು ಪೋಸ್ಟ್ ಗ್ರಾಜುಯೇಟ್ ಲೆವೆಲ್‌ನಲ್ಲಿ

ನೀಡುವ ಶಿಕ್ಷಣದ ನಡುವಿನ ವ್ಯತ್ಯಾಸವಾಗಿದೆ. ವೃತ್ತಿಪರ ಸಂಸ್ಥೆಗೆ ಪ್ರವೇಶ ಕೋರುವ ವಿದ್ಯಾರ್ಥಿಗೆ ಮತ್ತು ಸಮರ್ಥ ವೃತ್ತಿಪರರಾಗಲು ಮಾನದಂಡಗಳು ಏನೆಂದರೆ, ಕಡಿಮೆ ಮೆರಿಟ್‌ನ ವಿದ್ಯಾರ್ಥಿಗಳಿಗೆ ಆದ್ಯತೆಗಳನ್ನು ತೋರಿಸುವ ಮೂಲಕ ಮೆರಿಟ್ ವಿದ್ಯಾರ್ಥಿಗಳನ್ನು ಅನುಚಿತವಾಗಿ ನಡೆಸಿಕೊಳ್ಳುವುದು ಅಥವಾ ಅನಾನುಕೂಲ ಉಂಟುಮಾಡುವುದು.

20. ಪ್ರಸಕ್ತ ಮೊಕದ್ದಮೆಯಲ್ಲಿ, ವಿದ್ಯಾರ್ಥಿಯು ಮೆಡಿಕಲ್ ಕೋರ್ಸಿಗೆ ಸೇರಬೇಕಿದ್ದಾಗ, ಸಾಮಾನ್ಯ ಪ್ರವರ್ಗದಲ್ಲಿ ಸೀಟನ್ನು ಕ್ಲೇಮು ಮಾಡಿದಲ್ಲಿ ಅವು ಕಾಮೆಡ್‌ಕೆ ಯುಜಿಇಟಿ–2015 ರಲ್ಲಿ 'ಪಿಸಿಬಿ' ವಿಷಯಗಳಲ್ಲಿ ಸರಾಸರಿ ಶೇ.50 ಅಂಕಗಳನ್ನು (ಪ.ಜಾ., ಪ.ಪಂ. ಮತ್ತು ಇ.ಹಿಂ.ವ. ಗಳ ಸಂದರ್ಭದಲ್ಲಿ ಶೇ.40) ಗಳಿಸಬೇಕಾಗುತ್ತದೆಯೆಂದು ಪ್ರವರ್ಗೀಯವಾಗಿ ನಿರೂಪಿಸಲಾಗಿದೆ. ಆದುದರಿಂದ, ಪರೀಕ್ಷೆಯ ನಂತರ ರ್‍ಯಾಂಕಿಂಗ್‌ನ್ನು 'ಪಿಸಿಬಿ' ಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮಾಡಲಾಗಿದೆ. ಅರ್ಹನಾಗಲು, ವಿದ್ಯಾರ್ಥಿಯು ಸಾಮಾನ್ಯ ಮೆರಿಟ್ ಸಂದರ್ಭದಲ್ಲಿ ಕನಿಷ್ಠ ಶೇ.50 ಮತ್ತು ಇತರರ ಸಂದರ್ಭದಲ್ಲಿ ಶೇ.40 ಅಂಕಗಳನ್ನು ಗಳಿಸಬೇಕು. ಮೆರಿಟ್‌ಗೆ ಸಂಬಂಧಪಡುವಷ್ಟರಮಟ್ಟಿಗೆ, ಅದು ಲಭ್ಯವಿರುವ ಸೀಟುಗಳ ಸಂಖ್ಯೆಯ ಮೇಲೆ, ಶೇ.50 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಅವಲಂಬಿಸಿದೆ. ಆದುದರಿಂದ, ವಿದ್ಯಾರ್ಥಿಯು ಮೆಡಿಕಲ್ ಕೋರ್ಸ್‌ನಲ್ಲಿ ಸೀಟು ಪಡೆಯಲು ಅರ್ಹನಾಗುವುದಕ್ಕೆ 'ಪಿಸಿಬಿ'ಯಲ್ಲಿ ರ್‍ಯಾಂಕ್ ಗಳಿಸಿರಬೇಕು. ಪ್ರಶ್ನಿತ ಖಂಡವು ಇಂಗ್ಲೀಷ್ ಭಾಷೆಯಲ್ಲಿ ವಿದ್ಯಾರ್ಥಿ ಗಳಿಸಿದ ಯಾವುದೇ ಅಂಕಗಳನ್ನು ರ್‍ಯಾಂಕ್ ನಿರ್ಧರಿಸಲು ಸೇರಿಸುವುದಿಲ್ಲವೆಂದು ಸುಸ್ಪಷ್ಟಗೊಳಿಸುತ್ತದೆ. ಅದನ್ನು ವಿದ್ಯಾರ್ಥಿಯು 'ಪಿಸಿಬಿ' ವಿಷಯಗಳಲ್ಲಿ ಗಳಿಸಿದ, ಅಗತ್ಯವಿರುವ ಅಂಕಗಳ ಆಧಾರದ ಮೇಲೆ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಮೆರಿಟ್‌ಗಳನ್ನು, ರ್‍ಯಾಂಕನ್ನು, ನಿರ್ಧರಿಸುವಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು ಪರೀಕ್ಷೆಯ ನಂತರ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ನಿಯಮನವು ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಅನುಸಾರವಾಗಿದೆ. ಹಾಗಿದ್ದರೂ, ಪ್ರಶ್ನಿತ ಖಂಡದಲ್ಲಿ

ಇನ್ನೊಂದು ನಿಯಮನವನ್ನು ಸೇರಿಸುವ ಪ್ರಯತ್ನ ಮಾಡಲಾಗಿದೆ. ಅಂದರೆ ವಿದ್ಯಾರ್ಥಿಯು ಸಾಮಾನ್ಯ ಮೆರಿಟ್ ಪ್ರವರ್ಗದಲ್ಲಿ ಇಂಗ್ಲೀಷ್‌ನಲ್ಲಿ ಶೇ.50 (ಕರ್ನಾಟಕದ ಪ.ಜಾ., ಪ.ಪಂ. ಮತ್ತು ಇ.ಹಿಂ.ವ. ಗಳ ವಿದ್ಯಾರ್ಥಿಗಳ ವಿಷಯದಲ್ಲಿ ಶೇ.40) ಅಂಕಗಳನ್ನು ಪಡೆದ ಹೊರತು, ವಿದ್ಯಾರ್ಥಿಯು 'ಪಿಸಿಬಿ' ವಿಷಯಗಳಲ್ಲಿ ಶೇ.50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದರೂ, ಮೆಡಿಕಲ್ ಕೋರ್ಸಿಗೆ ಪ್ರವೇಶಕ್ಕೆ ಅರ್ಹನಲ್ಲ. ವಿದ್ಯಾರ್ಥಿಯು ಇಂಗ್ಲೀಷ್ ಭಾಷೆಯಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಗಳಿಸಿರದಿದ್ದಲ್ಲಿ, ವಿದ್ಯಾರ್ಥಿಯು ಮೆಡಿಕಲ್ ಕೋರ್ಸಿಗೆ ಪ್ರವೇಶಕ್ಕಾಗಿ ಪರಿಗಣನೆಯ ವಲಯದ ವ್ಯಾಪ್ತಿಗೆ ಬರುವುದೇ ಇಲ್ಲ ಎಂದು ಸದರಿ ಖಂಡವು ಸ್ಪಷ್ಟಪಡಿಸಿದೆ. ಇದನ್ನೇ ಬೇರೆ ರೀತಿ ಹೇಳುವುದಾದರೆ, ಸದರಿ ಅಧಿಸೂಚನೆಗೆ ಅನುಸಾರವಾಗಿ ಮೆಡಿಕಲ್ ಕೋರ್ಸಿಗೆ ಪ್ರವೇಶಕ್ಕೆ ಅರ್ಹರಾಗಲು, ಪ್ರತಿಯೊಬ್ಬ ವಿದ್ಯಾರ್ಥಿಯು ಇಂಗ್ಲೀಷ್‌ನಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಗಳಿಸಬೇಕು. ಆ ನಂತರ ಮಾತ್ರವೇ ಅವರು 'ಪಿಸಿಬಿ' ವಿಷಯುಗಳಲ್ಲಿ ಗಳಿಸಿದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಹಾಗಿದ್ದರೂ, ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು ಹೊರತುಪಡಿಸಲಾಗಿದೆ. ವೃತ್ತಿಪರ ಕೋರ್ಸಿಗೆ ಪ್ರವೇಶದ ಯೋಜನೆ ಅಡಿಯಲ್ಲಿ ಮತ್ತು ಮೇಲೆ ಹೇಳಲಾದ ತೀರ್ಪುಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಉಚ್ಚರಿಸಿರುವುದರ ಬೆಳಕಿನಲ್ಲಿ, ವೃತ್ತಿಪರ ಕೋರ್ಸಿಗೆ ಮೆರಿಟ್ ಏಕೈಕ ಮಾನದಂಡವಾಗಿದ್ದಾಗ, ಮತ್ತು ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು ಮೆರಿಟ್/ರ್‍ಯಾಂಕಿಂಗ್ ನಿರ್ಧರಿಸಲು ಗಣನೆಗೆ ತೆಗೆದುಕೊಳ್ಳದಿದ್ದಾಗ, ಆದರೆ ಅದನ್ನು ಮೆರಿಟ್ ವಿದ್ಯಾರ್ಥಿಗಳನ್ನು ಬಿಟ್ಟುಬಿಡಲು ಬಳಸಿಕೊಂಡಾಗ, ಸದರಿ ಖಂಡವು ಅನ್ಯಾಯ, ನಿರಂಕುಶ ಹಾಗೂ ತಾರತಮ್ಯದಿಂದ ಕೂಡಿದ್ದಾಗಿದೆ.

21. ವಾಸ್ತವವಾಗಿ, 1ನೇ ಪ್ರತ್ಯರ್ಜಿದಾರರು ಅದಕ್ಕೆ ವಿರುದ್ಧವಾದ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ವಿದ್ಯಾರ್ಥಿಯು ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯಲು, ಮೂರು ರೀತಿಯ ಮೂಲಗಳಿರುತ್ತವೆಂದು ಪ್ರವರ್ಗೀಯವಾಗಿ ನಿರೂಪಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

(ಎ) 2006ರ ಅಧಿನಿಯಮ 8ರ 3(6) ನೇ ಪ್ರಕರಣದ ಬೆಳಕಿನಲ್ಲಿ ಸರ್ಕಾರಿ ಕೋಟಾದಿಂದ;

(ಬಿ) 2006ರ ಅಧಿನಿಯಮ 8ರ 5(7)ನೇ ಪ್ರಕರಣದೊಂದಿಗೆ ಓದಲಾದ 4ನೇ ಪ್ರಕರಣದ ಬೆಳಕಿನಲ್ಲಿ, ವಿದ್ಯಾರ್ಥಿಗಳ ಮೆರಿಟ್‌ಅನ್ನು ನಿರ್ಧರಿಸುವ ಕಾಮೆಡ್‌ಕೆ ದಿಂದ; ಹಾಗೂ

(ಸಿ) ಗೌರವಾನ್ವಿತ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದಿಂದ ಅನುಮತಿಸಲಾದಂತೆ, ಯಾವುದೇ ಪ್ರವೇಶ ಪರೀಕ್ಷೆಯಿಲ್ಲದ ಅನಿವಾಸಿ ಭಾರತೀಯ (NRI) ಕೋಟಾದಿಂದ.

22. (ಎ) ಮತ್ತು (ಬಿ) ಖಂಡಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಕೋಟಾ ಶೇ.40 ರಷ್ಟು ಹಾಗೂ (ಸಿ) ಖಂಡಕ್ಕೆ ಸಂಬಂಧಿಸಿದಂತೆ ಕೋಟಾ ಶೇ.20 ರಷ್ಟಿದೆಯೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಇದು ಸಾಂಸ್ಥಿಕ ಪ್ರಾಶಸ್ತ್ಯವನ್ನು ಸಹ ಒಳಗೊಳ್ಳುತ್ತದೆ. ಸರ್ಕಾರದಿಂದ ನಡೆಸಲಾದ ಪರೀಕ್ಷೆಯಲ್ಲಿ, ಸರ್ಕಾರಿ ಕೋಟಾ ಅಡಿಯಲ್ಲಿ, ಕಾಲೇಜುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಟ್ಟಿಗೆ, ಅವರು ಇಂಗ್ಲೀಷ್ ಭಾಷೆಯಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಪಡೆಯಬೇಕೆಂಬ ನಿಯಮನವಿಲ್ಲ. ಅದೇ ರೀತಿ ಎನ್‌ಆರ್‌ಐ ಕೋಟಾದಲ್ಲಿ ಪ್ರವೇಶ ಪರೀಕ್ಷೆಯೇ ಇಲ್ಲ. ವಾಸ್ತವವಾಗಿ ಈ ಮೇಲೆ ನಿರೂಪಿಸಲಾದ ಸಂಗತಿಗಳು, ಪ್ರತಿಯೊಂದು ಸಂಸ್ಥೆಯು ತನ್ನದೇ ಆದ ನಿಯಮಗಳು ಮತ್ತು ವಿನಿಯಮಗಳನ್ನು ಹೊಂದಿದೆ ಎಂಬುದನ್ನು ಹೇಳುತ್ತವೆ. ಅವುಗಳಲ್ಲಿ ಅನೇಕ ಸಂಸ್ಥೆಗಳು ಇಂಗ್ಲೀಷ್ ಭಾಷೆಯಲ್ಲಿ ಶೇ.50 ಅಥವಾ ಶೇ.40 ಅಂಕಗಳನ್ನು ಗಳಿಸುವ ಅಂಥ ಯಾವುದೇ ನಿಯಮನವನ್ನು ಹೊಂದಿರುವುದಿಲ್ಲ. ಮೂರು ವಿವಿಧ ಮೂಲಗಳ ಅಡಿಯಲ್ಲಿ ವಿದ್ಯಾರ್ಥಿಗಳು ಈ ಕಾಲೇಜುಗಳಿಗೆ ಪ್ರವೇಶ ಪಡೆದಾಗ,

ಎಲ್ಲಾ ವಿದ್ಯಾರ್ಥಿಗಳೂ ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಾರೆ. ಅವರಿಗೆ ಅದೇ ವಿಷಯಗಳನ್ನು ಕಲಿಸಲಾಗುತ್ತದೆ. ಆದರೆ, ಕಾಮೆಡ್‌ಕೆ ಪರೀಕ್ಷೆಯ ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳ ತಂಡ ಮಾತ್ರ ಇಂಗ್ಲೀಷ್ ಭಾಷೆಯಲ್ಲಿ ಶೇ.50 ಅಥವಾ ಶೇ.40 ಅಂಕಗಳನ್ನು ಪಡೆಯುವ ನಿಯಮನವನ್ನು ಅನುಸರಿಸಬೇಕೆಂದು ಅಗತ್ಯಪಡಿಸಲಾಗಿದೆ, ಆದರೆ ಇತರ ವಿದ್ಯಾರ್ಥಿಗಳಿಗೆ ಸದರಿ ನಿಯಮನವನ್ನು ಪಾಲಿಸಬೇಕೆಂದು ಅಗತ್ಯಪಡಿಸಿರುವುದಿಲ್ಲ. ಆದುದರಿಂದ, ತಾರತಮ್ಯವು ದಾಖಲೆಯ ಮೇಲಿನಿಂದ ಸ್ಪಷ್ಟವಾಗಿದೆ. ಐಚ್ಛಿಕ ವಿಷಯಗಳಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಪ್ರವೇಶಪಡೆದು, ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುವ ಎಲ್ಲಾ ವಿದ್ಯಾರ್ಥಿಗಳು ತಮ್ಮಷ್ಟಕ್ಕೇ ಒಂದು ತರಗತಿಯಾಗಿ ರೂಪುಗೊಳ್ಳುತ್ತಾರೆ. ಅವರ ನಡುವೆ ಯಾವ ತಾರತಮ್ಯವೂ ಇರುವುದಿಲ್ಲ. ಅದಕ್ಕಿಂತ ಮುಖ್ಯವಾಗಿ, ಈ ವಿದ್ಯಾರ್ಥಿಗಳು ಸದರಿ ವಿಷಯಗಳನ್ನು ಅಂದರೆ 'ಪಿಸಿಬಿ'ಯನ್ನು ಇಂಗ್ಲೀಷ್‌ನಲ್ಲೇ ವ್ಯಾಸಂಗ ಮಾಡಿದ್ದಾರೆ ಮತ್ತು ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಯನ್ನು ಇಂಗ್ಲೀಷ್‌ನಲ್ಲೇ ಬರೆದಿದ್ದಾರೆ. ಇಂಗ್ಲೀಷ್‌ನಲ್ಲಿ ಉತ್ತಮ ತಿಳಿವಳಿಕೆ ಇಲ್ಲದೆ ಈ ಐಚ್ಛಿಕ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಿಲ್ಲ. ವೃತ್ತಿಪರ ಕೋರ್ಸಿಗೆ ಪ್ರವೇಶ ಪಡೆಯಲು ಕಾತರರಾದ ವಿದ್ಯಾರ್ಥಿಗಳು, ಈ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಗಳಿಸದೆ, ಅವರು ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯಲಾಗದಿರುವ ಕಾರಣ, ಈ ಐಚ್ಛಿಕ ವಿಷಯಗಳಿಗೇ ಅವರ ಶಕ್ತಿಸಾಮರ್ಥ್ಯವನ್ನು ಕೇಂದ್ರೀಕರಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ, ಅವರು ಇಂಗ್ಲೀಷ್ ಭಾಷೆಗೆ ಹೆಚ್ಚು ಗಮನ ಕೊಡದಿರಬಹುದು. ಇದಕ್ಕಾಗಿ ಅವರಲ್ಲಿ ತಪ್ಪು ಹುಡುಕಲಾಗುವುದಿಲ್ಲ. ಅದೇ ರೀತಿ ಸ್ಥಾನ ಪಡೆದ ಮತ್ತು ವಿವಿಧ ವೇದಿಕೆಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳಿಂದ ಇಂಗ್ಲೀಷ್ ಭಾಷೆಯನ್ನು ವ್ಯಾಸಂಗ ಮಾಡಬೇಕೆಂದು ಮತ್ತು ಅದರಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಗಳಿಸಬೇಕೆಂದು ನಿರೀಕ್ಷಿಸಲಾಗದು ಮತ್ತು ಐಚ್ಛಿಕ ವಿಷಯಗಳಲ್ಲಿ ಗಳಿಸಿದ ಅಂಕಗಳೇ ಏಕೈಕ ಮಾನದಂಡಗಳಾಗಿವೆ ಮತ್ತು ಮೆಡಿಕಲ್ ಕೋರ್ಸಿಗೆ ಪ್ರವೇಶಕ್ಕಾಗಿ ಕಾಮೆಡ್‌ಕೆ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳ ಸಂದರ್ಭದಲ್ಲಿಯೂ ಸಹ, ಮೆರಿಟ್‌ಅನ್ನು ನಿರ್ಧರಿಸುವಾಗ ಇಂಗ್ಲೀಷ್ ಭಾಷೆಯಲ್ಲಿ ಗಳಿಸಿದ ಅಂಕಗಳನ್ನು

ಗಣನೆಗೆ ತೆಗೆದುಕೊಂಡಿರುವುದಿಲ್ಲ, ಇಂಗ್ಲೀಷ್ ಭಾಷೆಯಲ್ಲಿ ಶೇ.50 ಅಥವಾ ಸಂದರ್ಭಾನುಸಾರ ಶೇ.40 ಅಂಕಗಳನ್ನು ಗಳಿಸುವ ಒತ್ತಾಯವು ಅನ್ಯಾಯವಾಗಿದೆ. ಇಂಗ್ಲೀಷ್ ಭಾಷೆಯಲ್ಲಿ ಕನಿಷ್ಟ ಅಂಕಗಳನ್ನು ಪಡೆಯುವುದಕ್ಕೂ ಮತ್ತು ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆಯುವುದಕ್ಕೂ ನಡುವೆ ಏನೂ ಸಂಬಂಧವಿಲ್ಲ. ಈ ಖಂಡವು, ಮೇಲೆ ಹೇಳಲಾದ ಎರಡು ತೀರ್ಪುಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಘೋಷಿಸಿರುವ ಕಾನೂನಿಗೆ ವಿರುದ್ಧವಾಗಿದೆ. ಮೆರಿಟ್‌ಗಳನ್ನು ನಿರ್ಧರಿಸುವಾಗ ಇಂಗ್ಲೀಷ್ ಭಾಷೆಯಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳದಿರುವಾಗ, ಇಂಗ್ಲೀಷ್ ಭಾಷೆಯಲ್ಲಿ ಕನಿಷ್ಠ ಅಂಕಗಳನ್ನು ಗಳಿಸುವ ಒತ್ತಾಯವು, ಈ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವ ಮೆರಿಟ್ ವಿದ್ಯಾರ್ಥಿಗಳ ದಾರಿಗೆ ಅಡ್ಡಿಯಾಗುತ್ತದೆ. ಯಾವುದೇ ದೃಷ್ಟಿಕೋನದಿಂದ ನೋಡಿದರೂ, ವಿದ್ಯಾರ್ಥಿಗಳು ಐಚ್ಛಿಕ ವಿಷಯಗಳಲ್ಲಿ ಗಳಿಸಿದ ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ್‍ಯಾಂಕುಗಳನ್ನು ವಹಿಸಿಕೊಡಲು ಅವರ ಪ್ರಕರಣವನ್ನು ಪರಿಗಣಿಸುವುದಕ್ಕೆ ಮುಂಚಿನ ಷರತ್ತಾಗಿ ಇಂಗ್ಲೀಷ್‌ನಲ್ಲಿ ವಿದ್ಯಾರ್ಥಿಗಳು ಶೇ.50 ಅಥವಾ ಶೇ.40 ಅಂಕಗಳನ್ನು ಪಡೆಯುವ ಬಗ್ಗೆ ಒತ್ತಾಯಿಸುವುದಕ್ಕೆ ಯಾವುದೇ ಸಮರ್ಥನೆಯು ನಮಗೆ ಕಂಡುಬಂದಿಲ್ಲ.

23. ವಿಬಂಧದ ವಾದಪತ್ರಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಒಬ್ಬ ಅಭ್ಯರ್ಥಿಯು ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಪರೀಕ್ಷೆಯಲ್ಲಿ ಅನುತ್ತೀರ್ಣನಾದ ನಂತರ, ಮತ್ತೆ ಹಿಂದಕ್ಕೆ ಬಂದು, ಅಂಥ ಪರೀಕ್ಷೆಯ ನಡವಳಿಯನ್ನು ನಿಯಂತ್ರಿಸುವ ಅಧಿಸೂಚನೆ ಅಥವಾ ನಿಯಮಗಳಲ್ಲಿ ಒಳಗೊಂಡಿರುವ ಯಾವುವೇ ನಿಬಂಧನೆಗಳು ಅಥವಾ ಒಪ್ಪಂದದಲ್ಲಿನ ಷರತ್ತುಗಳಲ್ಲಿ ತಪ್ಪು ಕಂಡುಹಿಡಿಯಲಾಗದು. ಆದರೆ, ಇದು ಬದಲಾಗದ ನಿಯಮವೇನಲ್ಲ. ಸದ್ಯದ ಪ್ರಕರಣದಲ್ಲಿ, ಇಂಗ್ಲೀಷ್‌ನಲ್ಲಿ ಸಾಮಾನ್ಯ ಪ್ರವರ್ಗದ ಅಭ್ಯರ್ಥಿಗಳಿಗೆ ಶೇ.50 ಮತ್ತು ಇತರರಿಗೆ ಶೇ.40 ಅಂಕಗಳ ನಿಯಮನದ ಮಟ್ಟಿಗೆ ಈ ವಿಷಯದಲ್ಲಿ ವಿದ್ಯಾರ್ಥಿಗಳು ಏನೂ ಹೇಳಿಲ್ಲ. ನಾವು ಹೇಳಿರುವಂತೆ ನಿಯಮನವು ಅನುಚ್ಛೇದ 14ನ್ನು ಉಲ್ಲಂಘಿಸುತ್ತದೆ ಮತ್ತು ಮೂಲಭೂತ ಹಕ್ಕಾಗಿರುವ ಸಮಾನತೆಯ ಖಂಡವನ್ನು ಅತಿಲಂಘಿಸಲಾಗಿದೆ, ಈ ರಾಷ್ಟ್ರದ ನಾಗರಿಕನಿಗೆ ಖಾತರಿ ಕೊಡಲಾದ ಸಾಂವಿಧಾನಿಕ ಹಕ್ಕಿನ ವಿರುದ್ಧ ಯಾವುದೇ

ವಿಬಂಧ ಇರಲಾಗದು. ವಿಷಯದ ಆ ದೃಷ್ಟಿಯಿಂದ, ಪ್ರತ್ಯರ್ಜಿದಾರರು ತುರ್ತು ಅಗತ್ಯಬಿದ್ದಾಗ ಬಳಸಿಕೊಂಡ ವಿಬಂಧದ ವಾದದಲ್ಲಿ ಯಾವುದೇ ಹುರುಳಿಲ್ಲದಿರುವುದು ನಮಗೆ ಕಂಡುಬಂದಿದೆ.

24. ಆದುದರಿಂದ, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

**ಆದೇಶ**

*(ಎ) ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.*

*(ಬಿ) ಇಂಗ್ಲೀಷ್‌ನಲ್ಲಿ ಸಾಮಾನ್ಯ ಪ್ರವರ್ಗದ ಅಭ್ಯರ್ಥಿಗಳಿಗೆ ಶೇ.50 ಮತ್ತು ಕರ್ನಾಟಕದ ಪ.ಜಾ., ಪ.ಪಂ. ಹಾಗೂ ಇ.ಹಿಂ.ವ. ಗಳ ಅಭ್ಯರ್ಥಿಗಳಿಗೆ ಶೇ.40 ಅಂಕಗಳನ್ನು ನಿಗದಿಪಡಿಸಿ, ಕಾಮೆಡ್‌ಕೆ ಯುಜಿಇಟಿ–2015 ದಿಂದ ಹೊರಡಿಸಲಾದ ದಿನಾಂಕ 02.12.2014ರ ಅಧಿಸೂಚನೆಯ ಪ್ರಶ್ನಿತ ಎ(ಇ) ಖಂಡವನ್ನು ಈ ಮೂಲಕ ರದ್ದುಪಡಿಸಲಾಗಿದೆ.*

*(ಸಿ) ಅರ್ಜಿದಾರರನ್ನು ಮತ್ತು ಅದೇ ರೀತಿಯಲ್ಲಿ ಸ್ಥಾನ ಪಡೆದ ವಿದ್ಯಾಥಿಗಳನ್ನು ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆಯಲು, ಪೂರ್ತಿಯಾಗಿ ಮೆರಿಟ್ ಆಧಾರದ ಮೇಲೆ ಮತ್ತು ಫಿಸಿಕ್ಸ್, ಕೆಮಿಸ್ಟ್ರಿ ಹಾಗೂ ಬಯಾಲಜಿ ವಿಷಯಗಳಲ್ಲಿ ಅವರು ಗಳಿಸಿದ ಅಂಕಗಳ ಆಧಾರದ ಮೇಲೆ ಪರಿಗಣಿಸತಕ್ಕದ್ದು.*

ಯಾವುದೇ ವೆಚ್ಚಗಳಿಲ್ಲ.